॥ ಓಂ ನಮಃ ಶಿವಾಯ ॥

॥ Om Namah Shivaya ॥



# ಕಲಿಯುಗವಾಹಿನಿ

# ಕಲಿಯುಗವಾಹಿನಿ
## KALIYUGAVAHINI

ಬರೆದವರು

ಸ್ವಾಮಿ ಕೃಷ್ಣಾನಂದ ಸರಸ್ವತಿ



**ಅರ್ಪಣೆ:**

**ಶ್ರೀ ಸ್ವಾಮಿ ವಿಷ್ಣುದೇವಾನಂದ ಸರಸ್ವತಿ ಆಧ್ಯಾತ್ಮ ಗುರುಗಳವರಿಗೆ**

ಮತ್ತು

**ಪೂರ್ವಾಶ್ರಮದ ಪೂಜ್ಯಶ್ರೀ ಮಾತಾಪಿತರಾದ**

**ಸುಳ್ಯಪದವು ಶ್ರೀ ಸಾಂತಪ್ಪ ಮತ್ತು ಶ್ರೀಮತಿ ಕಮಲಮ್ಮನವರಿಗೆ**

**ಸಮರ್ಪಣೆ**



**ಪ್ರಕಾಶಕರು :**

ಸೂರ್ಯ ಜ್ಯೋತಿ ಯೋಗ ವೇದಾಂತ ಪ್ರಕಾಶನ

ನಂ.೪೬, ೫ನೇ ಬ್ಲಾಕ್, ೪ನೇ ಕ್ರಾಸ್,

ಕೋರಮಂಗಲ, ಬೆಂಗಳೂರು–೫೬೦ ೦೯೫ ಕರ್ನಾಟಕ ಭಾರತ.

☎ : 080-25505972,. : 9902539230

www.suryajyothiyoga.org e-mail:suryajyothiyoga@gmail.com

ಸೂರ್ಯ ಜ್ಯೋತಿ ಯೋಗ ವೇದಾಂತ ಸಾಧನ ಗುರುಕುಲಂ

ಪದಡ್ಕ, ಪಡುವನ್ನೂರು ಗ್ರಾಮ, ಸುಳ್ಯಪದವು ಅಂಚೆ

ಪುತ್ತೂರು ತಾಲೂಕು, ದ. ಕ. ಜಿಲ್ಲೆ – 574313 ಭಾರತ.

## ಪರಿವಿಡಿ


01. ಮನದಿ ಮೊದಲಲಿ ನಿನಗೆ ನಮಿಪೆನು
02. ಸರ್ವಮಂಗಳೆ ಸದ್ಬುದ್ಧಿಯೇ ಶಾರದೆ
03. ತುಂಗಭದ್ರೆಯ ತಟದಿ
04. ಶಾರದಾ ದೇವಿಯೇ ಬಾಗಿ ನಮಿಪೆನು
05. ಕಾಸಿದ್ದು ಕೈಲಾಸ ಪಡೆಯಬೇಕೆಂದವನು
06. ಹಣೆಯಲ್ಲಿ ಬ್ರಹ್ಮ ಬರೆದಿರುವ ಬರಹವನು
07. ಮರಳಿ ಕೈಲಾಸಕ್ಕೆ ಶಿವ ಕರೆಯುತಿಹನು
08. ಮೂಳೆ ಮಾಂಸಗಳಿಂದ ತುಂಬಿರುವ ಚೀಲದಲಿ
09. ಯುಗ ಯುಗದಿ ಕರುಣೆಯಲಿ ಸಲಹುವನು ಅವನು
10. ಸತ್ಯ ಧರ್ಮ ನ್ಯಾಯವೆಂದರೇನು?
11. ಕೈಲಿ ಲೇಖನಿ ಹಿಡಿದು
12. ಪೂಜಿಸಲು ಬಂದಿರುವೆ ಪೂಜಾಲಯಕ್ಕೆ
13. ವಿಶ್ವದಲಿ (ಪೃಥ್ವಿಯಲಿ) ಪುಣ್ಯಭೂಮಿಯೆ ನಮ್ಮ ಭಾರತವು
14. ಕಾಮವನು ಗೆದ್ದಿಲ್ಲ
15. ಶಿವಶಕ್ತಿ ರೂಪಿಣಿಯೆ
16. ಆತ್ಮವನು ಅರಿಯದಿರೆ
17. 'ನಾನು' ನಾನೆಂದೇಕೆ?
18. ದಿನ ನಿತ್ಯ ನೀ ಜಪಿಸು ಗಾಯತ್ರಿ ಮಂತ್ರವನು
19. ಬ್ರಹ್ಮರಾಣಿಯು ನೀನು
20. ಮರುಳುಮಾನವ ತಿಳಿಯು ಮಾಯೆಯಾ....... ಆಟ
21. ಜಗದ ಪಿತನೇ ಅನಂದದಾತನೆ
22. ದೈನ್ಯದಲಿ ಈಶನನು ದಿನ ನೆನೆಯಬೇಕು
23. ಗಿಡ ಕಲ್ಲು ವೃಕ್ಷದಲಿ
24. ಕಾಲಿಗೊಂದು ಕಲ್ಲು ತಲುಗೆ
25. ಇಟ್ಟ ಗುರಿಯನು ನೀನು ದಿಟ್ಟತನದಿಂದಲೇ





26. ಪಟ್ಟ ಮಡೆಯಲಿ ಜನಿಸಿ
27. ಹೆಣ್ಣು ಹೆಣ್ಣೆಂದೇಕೆ
28. ದೇವ ದೇವನೆ ಶಿವಾನಂದನೆ
29. ಓ ಅಮ್ಮ ಭಗವತಿಯೆ ನೀ ರಕ್ಷಿಸಮ್ಮ
30. ಸದಾ ಎನ್ನ ಹೃದಯದಲ್ಲಿ ವಾಸಮಾಡೊ ಕೃಷ್ಣನೇ
31. ಕೊಲ್ಲೂರು ಹೇ ದೇವಿ ಮೂಕಾಂಬಿಕೇ
32. ವಾಣಿ ವೀಣೆಯ ಪಿಡಿದು ಕುಳಿತಿಹಳು ನೋಡು
33. ಶಂಕರಾ, ಶಂಕರಾ, ಶಂಕರಾ
34. ಕೃಷ್ಣ ದಾಸನೆ ನಾನು
35. ಮುಳ್ಳನ್ನು ಮುಳ್ಳಿನಿಂದಲೆ ತೆಗೆಯಬೇಕು
36. ಮನುಜ ಜೀವನದಲ್ಲೊಂದು ಬಲು ದೊಡ್ಡ ಕಡಲು
37. ನೀನು ನಗುತಿರುವಾಗ ಜಗವೆಲ್ಲ ನಗುತಿಹುದು
38. ಎನ್ನ ತಂದೆಯು ಶಿವನು
39. ಕಣ್ತೆರೆದು ನೀನೊಮ್ಮೆ ನೋಡು ಭಗವತಿಯ
40. ಕಲಿಯುಗದ ಕತೆಯನ್ನು ನೀವೊಮ್ಮೆ ಕೇಳಿ
41. ಸಂಸಾರ ಜೀವನವ ಸ್ಮರಿಸೆ ನೀ ನಿತ್ಯದಲಿ
42. ಗೀತೆಯ ಜಗದಲಿ ಸಾರಿದ ಕೃಷ್ಣ
43. ಸದಾ ಎನ್ನ ಹೃದಯದಲ್ಲಿ ವಾಸವಾಗಿರು ಕೃಷ್ಣನೇ
44. ಬೆಳ್ಳಿ ತಟ್ಟೆಯ ಮೇಲೆ
45. ಓ ಏಳಿ ಎದ್ದೇಳಿ
46. ಅಕ್ಕಸಾಲಿಗನೊಬ್ಬ
47. ಪೂರ್ವ ಜನ್ಮದಿಗೈದ ಪುಣ್ಯದಿ
48. ಹತ್ತೂರ ಸುತ್ತಿ ನೀ
49. ಕೋಟಿ ಚೆನ್ನಯರೆಂಬ
50. ಗುರುಗಳು ನುಡಿದರು ಕತೆಯೊಂದು

# ಮುದದಿ ಮೊದಲಲಿ ನಿನಗೆ ನಮಿಪೆನು

**॥ ಶ್ರೀ ಮಹಾ ಗಣಾಧಿಪತಯೇ ನಮಃ ॥**

ಮುದದಿ ಮೊದಲಲಿ ನಿನಗೆ ನಮಿಪೆನು
ಜಗದ ಪೂಜಕ ಶ್ರೀ ಗೌರಿಸುತನೇ ।
ಗಜದ ಮುಖವದು ಶಿವನ ಅಭಯವು
ಗಣಗಳಧಿಪತಿ ಶ್ರೀ ಗಣನಾಥನೇ ।
ಮುಕುತಿದಾಯಕ ನಹುದು ದೇವನೆ
ಭಕುತಿ ಎಮ್ಮೊಳು ನೀ ಕರುಣಿಸು
ಗೌರಿ ಗಂಗಾಧರನ ಸುತನೇ
ಭಾರಿ ಭೋಜನ ಪ್ರೀಯನೇ ।
ಇಳೆಯೊಳಗೆ ನಾವ್ ಬಳಲಿ ದಣಿದೆವು
ಕರುಣೆ ದೋರುತ ಸಲಹೆಮ್ಮನು
ಈಶ ಸುತನೇ ಶ್ರೀ ಲಕ್ಷ್ಮೀಪ್ರಿಯನೆ
ಮನದಿ ನಿತ್ಯವು ನೆಲಸು ದೇವನೆ
ವಿಘ್ನವೆಲ್ಲವ ಕಳೆದು ಜಗದಲಿ
ನಿರ್ವಿಘ್ನದಿಂದಲಿ ನಡೆಸು ದೇವನೆ
ನಿನ್ನ ಬಿಟ್ಟರೆ ಕಾವರಿಲ್ಲರು
ಜ್ಞಾನದಾತನೇ ನೀ ಜಗದಲಿ
ಶರಣು ನಿನಗೆ ಶ್ರೀ ಗಣೇಶ ದೇವನೆ
ಕರುಣೆ ತೋರುತ ನೀ ರಕ್ಷಿಸು



# ಸರ್ವಮಂಗಳೇ ಸದ್ಬುದ್ಧಿಯೇ

**॥ ಓಂ ಶ್ರೀ ಸರಸ್ವತ್ಯೈ ನಮಃ ॥**

ಸರ್ವಮಂಗಳೇ ಸದ್ಬುದ್ಧಿಯೇ
ಶಾರದಾ ಭಗವತೀ ಜನನೀ
ನಿನ್ನ ನುತಿಸುವೆನನವರತ ಭಕುತಿಯೊಳು ॥
ಎನ್ನ ಈ ಕಿರು ಕೃತಿಗೆ
ನಿನ್ನ ಕರುಣೆಯ ದೃಷ್ಟಿ
ದಯದೋರಿ ಈಯುತಲಿ ಹರಸೆನ್ನ ತಾಯೀ
ಕಾಮಕ್ರೋಧಗಳೆಂಬ
ಆ ಮಹಾ ಪಾಶದಿಂ
ಬಂಧನವ ಕಳಚಿ ಪೊರೆಯೆನ್ನ ಜನನೀ
ಈಯುವೆನು ಜಗಕಿಂದು
ಎನ್ನ ಮನ ಮಾತೆರಡ
ಪ್ರೇಮದಲಿ ಹರಸಿ ಪೊರೆಯಿರೆಂದು
ಸರ್ವರಲಿ ಬೇಡುವೆನು
ಆತ್ಮದಾ ಪ್ರೇಮವನು
ಧನ, ಕನಕ, ಐಶ್ವರ್ಯ ಬೇಡ ಎನಗೆ
ನಿಮ್ಮ ಪ್ರೇಮವೆ ಎನ್ನ
ಜೀವನಕೆ ಬೆಳಕಾಗಿ
ಅನವರತ ಹಾರೈಕೆ ಬೇಡುತಿಹೆನು

# ತುಂಗಭದ್ರೆಯ ತಟದಿ

## ॥ ಓಂ ಶ್ರೀ ರಾಘವೇಂದ್ರಾಯ ನಮಃ ॥

ತುಂಗಭದ್ರೆಯ ತಟದಿ
ಮನೆಮಾಡಿ ಕುಳಿತಿರುವ
ಸೌಮ್ಯ ರೂಪದ ಗುರುವೆ ನಿನಗೆ ಶರಣೆಂಬೆ
ಭಕ್ತರನು ಪೊರೆಯುತ್ತ
ಕಷ್ಟಗಳ ಕಳೆಯುತ್ತ
ಇಷ್ಟವನು ಈಯುತಿಹ ಗುರು ನಿನಗೆ ನಮಿಪೆ
ರಾಘವೇಂದ್ರಾ ನೀನು
ಕಾಮಿಸಿಹ ಫಲನೀವೆ
ಕಾಮಧೇನುವೆ ಆಗಿ ಮೆರೆಯುತಿಹೆ ಜಗದಿ
ಭಕ್ತರಂಜಕ ನೀನು
ಮುಕ್ತಿದಾಯಕ ನೀನು
ಜಗದೊಡೆಯ ಶ್ರೀ ಹರಿಯ ಜ್ಯೋತಿ ತಾ ನೀನು
ನಿನ್ನನೆಂದಿಗು ಬಿಡೆನು
ಬಿಟ್ಟು ಬದುಕೆನು ನಾನು
ಕ್ಷಮಿಸೆನ್ನ ಅಪರಾಧವನ್ನೆಲ್ಲ ನೀನು
ಎನ್ನ ಬಂಧನ ಕಳೆದು
ನೀಡೆನಗೆ ಶಾಂತಿಯನು
ಜಗದೊಡೆಯ ಎನ್ನೊಡೆಯ ಶ್ರೀ ರಾಘವೇಂದ್ರ



# ಶಾರದಾ ದೇವಿಯೇ ಬಾಗಿ ನಮಿಸುವೆನು

## ॥ ಓಂ ಐಂ ಸರಸ್ವತ್ಯೈ ನಮಃ ॥

ಶಾರದಾ ದೇವಿಯೇ ಬಾಗಿ ನಮಿಸುವೆನು
ನೀಡೆನಗೆ ಸದ್ಬುದ್ಧಿ ಶುದ್ಧ ಜ್ಞಾನವನು
ಮಾಡಿಸೆನ್ನೊಳು ನಿತ್ಯ ನಿನ್ನ ಸೇವೆಯನು
ಹಾಡಿಸೆನ್ನೊಳು ನೀನು ನಿನ್ನ ಗಾನವನು
ನೆಲೆಸೆನ್ನ ಕಂಠದಲಿ ನೀ ನಿತ್ಯ ಜನನೀ
ಉಳಿಸೆನ್ನ ಜೀವನದ ಹೆ ಅಭಯದಾಯಿನೀ
ಕನಸಲ್ಲೂ ನಾ ನಿನ್ನ ಮರೆಯದಂತಿರಲಿ
ಎಲೆ ಜನನಿ ನಿನ್ನ ಕೃಪೆ ಎಮ್ಮ ಮೇಲಿರಲಿ
ಧರ್ಮದಲಿ ನೀ ಎಮ್ಮ ಜೀವನವ ನಡೆಸು
ಕರುಣೆಯಿಂದಲಿ ಎಮಗೆ ವಿದ್ಯೆಯನು ಕಲಿಸು
ನಿನ್ನ ನಾಮವು ಸ್ಮೃತಿಯಲಿ ಇರಲಿ ನಿತ್ಯ
ನೀ ದೈವ ನೀ ತಾಯಿ ನೀ ಸರ್ವ ಸತ್ಯ
ಬ್ರಹ್ಮನಾ ರಾಣಿನೀ ಅಭಯದಾಯಿನಿಯು
ಓ ಜನನಿ ಸರಸ್ವತಿಯೆ ಭಾಗ್ಯದಾಯಿನಿಯು
ನೀನೀವೆ ಸರ್ವವನು ನಿನ್ನ ಭಕುತರಿಗೆ
ಕಷ್ಟವಿಲ್ಲವು ಸತ್ಯ ನಿನ್ನ ನೆನದವಗೆ
ಎಲೆ ತಾಯಿ ನೀನೆಮ್ಮ ಕರೆ ಒಮ್ಮೆ ಕೇಳು
ಕರುಣೆಯಿಂದಲಿ ಎಮ್ಮ ನೀ ಮಾಡು ಪಾರು

## ಕಾಮವನು ಗೆದ್ದಿಲ್ಲ

**॥ ಓಂ ಶ್ರೀ ರಾಜರಾಜೇಶ್ವರ್ಯೈ ನಮಃ ॥**

ಕಾಮವನು ಗೆದ್ದಿಲ್ಲ
ಎಂದೇಕೆ ಕೊರಗುತಿಹೆ ?
ಕಾಮಿನಿಯ ಕಾಲಿನಲಿ ಕಣ್ಣಿಟ್ಟು ನೋಡು
ಪಾದ ನೋಡಲು ನಿನ್ನ
ಮನ ಮಾಡದದು ಮುನ್ನ
ಅವಳೆ ನಿನ್ನಯ ಮಾತೆ ಎಂದು ನೀ ನೆನೆಯೆ
ಕಾಲಿಗುಂಗುರವಿರುವ
ಕಾಮಿನಿಯ ಕಂಡು ನೀ
ಕಾಮಿಸಲು ಅಸದಳವು ಕಾಮ ರೂಪದಲಿ
ದಿನ ದಿನವು ನೀ ನಿನ್ನ
ಮನ ವನದರಲಿ ನಿಲಿಸು
ಮನುಜ ಲೋಕದಿ ನೀನು ಕಾಮವನು ದಹಿಸು
ಮುಖ ನೋಡಿ ಸುಖಪಡುವ
ಆತುರವು ನಿನಗೇಕೆ ?
ಸಕಲರೆಲ್ಲರಲವನು ಇರುವ ನಿಜ ಶಿವನು
ಕಂಗಳಿಗೆ ಕಾಣುವುದು
ಮಂಗ ಮಾಯೆಯ ಜಗವು
ಸುಖವಿಲ್ಲ ಜೋಕೆಯಾಗಿರು ನೀನು ಜಗದಿ
ಕೆಸರ ಮೇಲಿರುತಿರುವ
ತಾವರೆಯ ತೆರದಲ್ಲಿ
ಉಸಿರ ಭೂಮಿಯ ಮೇಲೆ ಕಳೆ ನೀನು ಜಗದಿ
ಆಸೆ ಪಟ್ಟರೆ ನೀನು



ಮೋಸದಲಿ ಬೀಳುತಲಿ
ನಾಶವಾಗುವೆ ಮುಂದೆ ಕಾಮದಾಸೆಯಲಿ
ಕಾಮಿನಿಯ ರೂಪದಲಿ
ಇರುತಿರುವ ದೈವವನು
ಕಂಡು ನೀ ನಿದನೆಲ್ಲ ಏಕೆ ಮರೆತಿರುವೆ ?
ಮಾಯೆಯನೆ ನೀ ದಾಟು
ಮೋಹವನು ನೀ ಸುಟ್ಟು
ಪಡೆ ನಿತ್ಯ ಶಾಂತಿಯನು ಅದುವೆ ಜಯ ನಿನಗೆ
ಕಷ್ಟ ಸುಖಗಳನ್ನೆಲ್ಲ
ಇಚ್ಛೆಯಿಂದಲೆ ಪಡೆವೆ
ಕರ್ಮಫಲವದು ಬೆನ್ನ ಬಿಡದಿಂದು ಚಿನ್ನ
ಮಾರ್ಗವೊಂದೇ ಇದಕೆ
'ಶಿವಧ್ಯಾನ' ವಿಹುದಿದಕೆ
ಜಪಿಸು ನೀ ನನವರತ ಶಿವಮಂತ್ರವನ್ನು
ಕಳೆವೆ ನಿನ್ನಯ ಪಾಪ
ಕರ್ಮಗಳ ತಾಪವನು
ಪಡೆವೆ ನಿತ್ಯವು ಶಾಂತಿ ಇದು ಒಂದೇ ಪಥವು
ಸಾಕು ಜಗದಲಿ ಸುಖವು
ಬೇಕು ಶಿವನಲಿ ಜಗವು
ಜೋಕೆಯಿಂದಲಿ ನೀನು ತಿಳಿ ನಿತ್ಯ ಸತ್ಯ
ಮುಕ್ತಿಗಾಗಿಯೆ ನಾವು
ಹುಟ್ಟಿ ಬಂದಿಹೆವಿಲ್ಲಿ
ಮನುಜ ದೇಹವು ಒಂದೇ ಬೇರೆ ಗತಿಯಿಲ್ಲ
ಅದಕಾಗಿ ಹಾ ತೊರೆದು
ಸತ್ಯ ಮಾರ್ಗದಿ ನಡೆದು
ಮುಂಬರಿಯೆ ತಪ್ಪದದು ಶಾಂತಿ ಧಾಮವದು.

# ಶಿವಶಕ್ತಿ ರೂಪಿಣಿಯೆ, ದೇವೀ ಭಗವತಿಯೆ

|| ಓಂ ದುಂ ದುರ್ಗಾಯೈ ನಮಃ ||

ಶಿವಶಕ್ತಿ ರೂಪಿಣಿಯೆ, ದೇವೀ ಭಗವತಿಯೆ
ಕಾವರಾರಿಲ್ಲಮ್ಮ । ನೀ ನಲ್ಲದಿಂದು
ಸಕಲ ಜೀವರಲಿರುವೆ । ಧ್ಯಾನಿಸಿದರಲ್ಲಿರುವೆ
ಆವರೀತಿಲಿ ನಿನ್ನ । ಭಜಿಸಬೇಕಮ್ಮ ?
ಏನೆಂದು ಬಣ್ಣಿಸಲಿ । ಆವ ತೆರ ಪೂಜಿಸಲಿ ।
ಸರ್ವರಲಿ ನೀನಿರುವೆ । ಪಾರ್ವತಿಯೆ ಜನನೀ
ಹಿಂದೆ ಭಂಡಾಸುರನ । ವಧೆಗಾಗಿ ನಿ ಬಂದೆ
ದುಷ್ಟರನು ವಧಿಸಿ ನೀ । ಪೊರೆದಿರುವೆ ಜಗವ
ಚಂಡ ಮುಂಡರ ಶಿರವ । ತರಿದು ನೀ ಚೆಂಡಾಡಿ
ಮಹಿಷ ಮರ್ಧಿನಿಯಾಗಿ । ಮೆರೆದಿರುವೆ ಜನನೀ
ಹರಿ ಹರರು ಬ್ರಹ್ಮಾದಿಗಳಿಗೆ । ನೀ ತಾಯಂತೆ
ಸೃಷ್ಟಿ ಸ್ಥಿತಿ ಲಯಗಳಿಗೆ । ಕಾರಣಳು ನೀ ಮಾತೆ
ನಿನ್ನ ಕರುಣೆಯು ಒಂದೆ । ದೊರಕಿದರೆ ಸಾಕು
ಹೇ ಜನನಿ ಲಲಿತಾಂಬೆ । ನೀ ಪೊರೆಯಬೇಕು
ಕಾಮ ಕಾಂಚನ ಮಾಯೆ । ಎನ್ನ ಬಂಧಿಸದೆ
ಭಕ್ತಿ ಎನಗೀಯುನೀ । ಪ್ರತಿ ಜನುಮ ಮುಂದೆ
ಸತ್ತು ಹುಟ್ಟುವ । ಜನುಮ ಮತ್ತೆ ಬೇಡಮ್ಮ
ಸಂಸಾರ ಬಂಧನವ । ಕಳೆದು ಸಲಹಮ್ಮ



# ಆತ್ಮವನು ಅರಿಯದಿರೆ

**"ಅಹಂ ಬ್ರಹ್ಮಾಸ್ಮಿ"**

ಆತ್ಮವನು ಅರಿಯದಿರೆ
ಅಲೆದಾಡಿ ಫಲವೇನು ?
ಅಲೆದಾಡಿ ಕಾಣದಿಹ
ಅವ ನಿನ್ನಲಿರುವ
ಹತ್ತೂರ ಸುತ್ತಿನೀ
ಮತ್ತೆ ಮರಳುವೆ ಮನೆಗೆ
ಮೆಲ್ಲನೇ ಕುಳಿತು ನೀ
ಧ್ಯಾನಿಸಲು ಕೊನೆಗೆ
ನೀನರಿವೆ ದೈವವನು
ನೀನಿರಿವೆ ಸರ್ವವನು
ನೀನರಿವೆ ಮೂಲೋಕ
ದೊಡೆಯ ಶಿವನನ್ನು
ಧ್ಯಾನ ಮಾಡದೆ ನೀನು
ತಿಳಿವೆ ಆತನ ಏನು ?
ಭಕ್ತಿ ನಿನಗಿರಲಾತ
ಬಂದು ಕಾಣಿಪನು
ನಿತ್ಯ ಕೀರ್ತನೆ ಹಾಡಿ
ಜಪತಪಗಳನು ಮಾಡಿ
ಗುಪಿತದಿಂದಿರುವ ಶಿವ
ಶಕ್ತಿಯನು ನೋಡು

# ನಾನು ನಾನೆಂದೇಕೆ

॥ ಓಂ ನಮಃ ಶಿವಾಯಃ ॥

‘ನಾನು’ ನಾನೆಂದೇಕೆ
ಎಂದೇಕೇ ಉಸುರುತಿಹೆ ?
ಅರಿಯಲಾರೆಯೆ ನೀನು ‘ನೀನೇ’ ನಿಜ ಶಿವನು
ನಿನ್ನಾತ್ಮನೇ ಅವನು
ಪರಮ ಜ್ಯೋತಿಯೆ ಶಿವನು
ಮೂರು ಲೋಕದ ಒಡೆಯ ಅವನೆ ಪರಶಿವನು
ಹೃದಯದಲಿ ಕುಳಿತಿಹನು
ಮನನ ಮಾಡುತ ನೀನು
ಧ್ಯಾನದಲಿ ನಿನಗಿಲ್ಲಿ ಬಂದು ಕಾಣಿಪನು
ಸರ್ವರಲಿ ಅವನಿಹನು
ಸರ್ವರೂಪನೆ ಅವನು
ಕೈಲಾಸವಾಸಿಯೇ ಆ ‘ನಿತ್ಯ’ ಶಿವನು
ಶ್ರದ್ಧೆ ಭಕ್ತಿಯು ಇರಲು
ಸಾಧನೆಯು ನಿನಗಿರಲು
ಮೋದದಿಂದಲಿ ನಿನ್ನ ಹಾದಿ ನಡೆಸುವನು
ಇಂತಿರಲು ನೀನೇಕೆ
ಅಲೆದಾಡಿ ಹುಡುಕುತಿಹೆ ?
ನಿನಗಾಗಿ ಎಂದೆಂದು ನಿನ್ನಲ್ಲೇ ಇಹನು



# ದಿನ ನಿತ್ಯ ನೀ ಜಪಿಸು

॥ ಓಂ ಭೂರ್ಭುವಸ್ವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ
ಧೀಯೋ ಯೋನಃ ಪ್ರಚೋದಯಾತ್ ॥

ದಿನ ನಿತ್ಯ ನೀ ಜಪಿಸು
‘ಗಾಯತ್ರಿ’ ಮಂತ್ರವನು
ಶ್ರದ್ಧೆಯಿಂದಲಿ ನೀನು ಜಪಿಸು ಮನುಜ
ವ್ಯರ್ಥದಲ್ಲಿ ನೀ ಕಳೆವೆ
ನಿನ್ನ ಈ ಜನಮವನು
ಅರಿಯಲಾರೆಯ ನೀನು ಅಳಿವೆ ಒಂದು ದಿನ
ಬಾಲ್ಯವದು ಕಳೆದಾಯ್ತು
ಎಳೆತನವು ಬರಲದುವೆ
ಮುದಿತನವು ತಪ್ಪದದು ಸತ್ಯ ಮನುಜ
ಆಟ ಓಟಗಳಾಯ್ತು
ಕೂಟ–ಭೋಗಗಳಾಯ್ತು
ಕೊನೆ ಕಾಲದಲಿ ಕೈಗೆ ಕೋಲು ಬಂತು
ನಡೆಯಲಾರೆನು ಅಯ್ಯೋ
ನೋಡಲಾರೆನು ಕಣ್ಣು
ಕಾಣಿಸದು ಎನಗೆಂದು ನೀನಳುವೆ ನಿತ್ಯ
ಸತಿಸುತರು ನಿನ್ನಂದು
ಕಡೆಗಣಿಸಿ ನುಡಿಯುವರು
ಎಡೆಬಿಡದೆ ಮೂದಲಿಸಿ ದೂರ ತಳ್ಳುವರು
ಸಡಗರದ ಜೀವನವ
ನೆನೆದು ನೀ ಕೊರಗುತಿರೆ
ಸ್ಮರಿಸಲಾರೆಯೆ ಶಿವನನೊಮ್ಮೆ ನೀನು
ಸತ್ತು ಹೋಗುವ ಮುನ್ನ ಚಿತ್ತವನು ನೀನೊಮ್ಮೆ
ಇತ್ತ ತಿರುಗಿಸಿ ಕೇಳು ಓ ನನ್ನ ಚಿನ್ನಾ
ಯೌವನವು ಇರುವಾಗ ಶಿವನನ್ನು ನೀ ಸ್ತುತಿಸಿ
‘ಗಾಯತ್ರಿ’ ಮಂತ್ರವನು ಜಪಿಸು ನೀ ನಿತ್ಯ

ಅರಿತುಕೊ ಅವನನ್ನು
ಗೆಲ್ಲುನೀ ಮಾಯೆಯನು
ಮುಕ್ತಿಯನು ನೀನಿಲ್ಲಿ ಪಡೆದಮರನಾಗು
ಸರ್ವ ಮಂತ್ರಕು ಮೂಲವದುವೆ ದಿಟ ಗಾಯತ್ರಿ
ಸರ್ವ ಆತ್ಮದ ಬಲವು ನಿಜವು 'ಗಾಯತ್ರಿ'
ಶುದ್ಧದಲಿ ನೀ ಮಿಂದು
ಜಪಿಸುತಿರೆ ಈ ಮಂತ್ರ
ಸಿದ್ಧಿಯನು ಪಡೆಯುತಲಿ ನೀ ಧನ್ಯನಾಗಿ
ಬುದ್ಧಿ ವಿದ್ಯೆಗೆ ಮೂಲ
ಆತ್ಮ ಶುದ್ಧಿಗೆ ಜಾಲ
ಸತ್ಯವಿದುವೇ ಮಂತ್ರ ಒಂದೇ ಗಾಯತ್ರಿ
ಜಾತಿ ಭೇದಗಳಿಲ್ಲ
ದೈವವನು ಪೂಜಿಸಲು
ಘೋರನಾಗುತ "ಸಿಂಹ" ಕೂಸು ನೀನಾಗು
ಓಂಕಾರದಿಂದಿರುತ
ಓಂಕಾರವೇ ಸ್ವರೂಪ
'ಓಂ' ಎಂದು ಉಚ್ಚರಿಸಿ ನೀ ಮುಂದೆ ಸಾಗು
ಜೀವನದ ಪಥದಲ್ಲಿ
ನಾವಿಲ್ಲಿ ಸ್ಥಿರವಲ್ಲ
ಕೆಲವು ದಿನಗಳ ಓಟ ಮಾಯೆಯಾ ಆಟ
ಅರಿತು ನಿಜವನು ನೀನು
ಬೆರೆತು ಶಿವನನು ತಾನು
ನಿತ್ಯ ಆನಂದವನು ಪಡೆ ನೀನು ಮನುಜ
ಜಪಿಸು ನೀ ಗಾಯತ್ರಿಯನು
ಸ್ತುತಿಸು ನೀ ದೈವವನು
ತಪ್ಪದದು ಮುಕ್ತಿದಾಮವು ನಿನಗೆ ನಿತ್ಯ ಮನುಜ



## ಬ್ರಹ್ಮರಾಣಿಯು ನೀನು ಎಮ್ಮ ಮಾತೆಯು ನೀನು

**॥ ಓಂ ಸರಸ್ವತ್ಯೈ ನಮಃ ॥**

ಬ್ರಹ್ಮರಾಣಿಯು ನೀನು ಎಮ್ಮ ಮಾತೆಯು ನೀನು
ಸರ್ವ ವಿದ್ಯಗೆ ಮೂಲ ನೀನೊಂದೆಮಾತೆ ।
ನಿನ್ನ ಕರುಣೆಯ ದೃಷ್ಟಿ ಸಾಕು ಒಂದೇ ಎಮಗೆ ।
ನೀಡೆಮಗೆ ಸದ್ಬುದ್ಧಿ ಓ ಭಾಗ್ಯದಾತೆ ॥
ಕೈಯಲ್ಲಿ ವೀಣೆಯದು ಮಿಡಿಯುತಿದೆ ಅನವರತ
'ಓಂ ' ಎಂದು ಸಾರುತಿದೆ ಪ್ರಣವ ಮಂತ್ರವನು ।
ನಾರದಗೆ ನೀ ಕೊಟ್ಟೆ ನಿನ್ನ ಜ್ಞಾನವನೆಲ್ಲ ॥
ನಾವೇನು ಸುತರಲ್ಲವೇ ನಿನ್ನ ಜನನೀ ?
ಅಮ್ಮ ನೀ ನೋಡೆಮ್ಮ ಒಮ್ಮೆಯಾದರು ಜನನಿ
ಸುಮ್ಮನೇ ಬ್ರಹ್ಮನೊಡನಿದ್ದೇನು ಸರಸ ?
ಶಾರದೆಯೆ ಜಗದಂಬೆ ಗಾಯತ್ರಿ ನೀ ದೇವಿ
ಸರ್ವವೂ ನೀನಮ್ಮ ಓ ಆದಿ ಶಕ್ತಿ।
ಕೃಪೆದೋರು ಹೇ ಜನನಿ ಸದಾ ಅಭಯದಾಯಿನಿ ॥
ನೀಡೆಮಗೆ ದರುಶನವ ಓ ನನ್ನ ಜನನೀ ।
ಆಚಾರ್ಯ ಶಂಕರಗೆ ಭಕ್ತಿಶಕ್ತಿಯನ್ನಿತ್ತೆ ॥
ಅತ್ತೆವಧಿಕವು ನಾವು ಬಂದು ನೀ ಸಲಹು
ಓ ದೇವಿ ಶಾರದೆಯೇ ಓ ದೇವಿ ಭಾರತಿಯೇ
ಓ ದೇವಿ ಜಗಜನನಿ ನೀ ಧನ್ಯಮಾತೆ ॥
ನಿನ್ನ ನಾಮದ ಬಲದಿ ಮೂಕ ಮಾತಾಡುವನು ।
ನಿನ್ನ ಧ್ಯಾನದ ಬಲದಿ ಯೋಗಿ ತಾನಾಗುವನು ॥
ಜನನಿ ನೀನಿಂದೆಮ್ಮೆಡೆಗೆ ಒಮ್ಮೆ ನೋಡಮ್ಮ । ಜಯ ಜಯತು ಜಗದಂಬೆ॥
ಜಯತು ಹೇ ಮೂಕಾಂಬೆ । ಜಯ ಜಯತು ಸಾವಿತ್ರಿ ಜಯತು ಗಾಯಿತ್ರಿ॥

## ಮರುಳು ಮಾನವ ತಿಳಿಯು ಮಾಯೆಯಾ ಆಟ

**॥ ಓಂ ಶ್ರೀ ಮಹಾಮಾಯಾಯೈ ನಮಃ ॥**

ಮರುಳು ಮಾನವ ತಿಳಿಯು ಮಾಯೆಯಾ ಆಟ
ಹೆಣ್ಣಿನಲಿ ಇರುವುದೈ ಕಿರು ನಗೆಯ ನೋಟ
ಹೊರಗಿಂದ ಸುತ್ತಿಹಳು ಬಣ್ಣದಾ ಬಟ್ಟೆ
ಕಾಣುತಲಿ ಮರುಳಾಗಿ ನೀನೇಕೆ ಕೆಟ್ಟೆ ?
ನಿಮಿಷದಲಿ ನಿನ್ನ ಮನ ಓಡುವುದು ಅಲ್ಲಿ
ಅನುರಾಗ ಹುಟ್ಟಿರಲು ನಿನ್ನ ಮನದಲ್ಲಿ
ಪತಂಗವದು ಬೆಂಕಿಯನು ಕಂಡ ತೆರ ನೀನು
ಅವಳ ಜಪವನೆ ಮಾಳ್ಪೆ ನಿತ್ಯ ನೀ ಕೊರಗಿ
ಅವಳ ಒಡನಾಟವೇ ಸಾಕೆಂಬೆ ಜಗದಿ
ನೆನೆ ನೆನೆದು ಕೃಷವಾಗಿ ನೀ ಮರುಗಿ ದಿನದಿ
ಮನವು ರೋಗದಿ ಬಳಲಿ ಹುಚ್ಚನಂತಾಗಿ
ಕನಸಲ್ಲಿ ದಿನದಲ್ಲಿ ಅವಳ ರೂಪದಲಿ
ದಿನದ ಕೆಲಸವನ್ನೆಲ್ಲ ಮುಚ್ಚಿ ನೀ ಕುಳಿತೆ
ಅವಳ ಧ್ಯಾನದಿ ದಿನವ ನೀ ಮುಂದೆ ಕಳೆದೆ
ಎಲೆ ಮಗುವೆ ಏಕಿನಿತು ಕಾಮ ಪ್ರೇಮವದು ?
ಏನಿಹುದು ಅವಳಲ್ಲಿ ಹೊಲಸು ಚೀಲವದು
ಮಲ ಮೂತ್ರ ರಕ್ತ ಮಾಂಸದ ಹಾಳು ದೇಹ
ಹೇಸಿಗೆಯ ಚೀಲವದು ಆಸೆ ಹುಟ್ಟಿಸುತ
ತ್ಯಜಿಸು ನೀ ದುಗುಡವನು ಮೋಹವನು ಮಗುವೇ
ನೆನೆ ನೀನು ಶಿವನನ್ನು ಅನುದಿನವು ಜಗದಿ
ಪ್ರೇಮವನು ನೀ ಮಾಡ ನಿತ್ಯ ಶಿವನಲ್ಲಿ
ಕಾಮವನು ದಹಿಸಿ ನೀ ಶ್ರೀರಾಮ ನಾಗಿಲ್ಲಿ



## ಜಗದ ಪಿತನೇ ಆನಂದದಾತನೆ

**॥ ಓಂ ನಮೋ ಭಗವತೇ ಶಿವಾನಂದಾಯಃ ॥**

ಜಗದ ಪಿತನೇ ಆನಂದದಾತನೆ ।
ಜ್ಞಾನವನು ನೀ ಕರುಣಿಸು ॥
ಶೀಘ್ರದಲ್ಲಿಯೆ ದುರ್ಗುಣವೆಲ್ಲವ ।
ದೂರ ಮಾಡುತ ನೀ ಉದ್ಧರಿಸು ॥
ಎಮ್ಮ ನಿನ್ನಯ ಪಾದ ಕಮಲದಿ ।
ಮೋದದಿಂದಲಿ ಸೇರಿಸು ॥
ಬ್ರಹ್ಮಚಾರಿಯ ಮಾಡುತೆಮ್ಮನು ।
ಧರ್ಮ ರಕ್ಷಣೆ ಮಾಡಿಸು ॥
ಪ್ರೇಮದಿಂದಲಿ ನಾವು ನಿತ್ಯವು ।
ನಿನ್ನ ಭಕ್ತರ ಸೇವಿಸೆ ॥
ಹರಸು ಎಮ್ಮಯ ಕರುಣ ಮೂರ್ತಿಯೆ ।
ಸತ್ಯ ಮಾರ್ಗದಿ ನಡೆಸು ನೀ ॥
ಐಕ್ಯ ಭಾವನೆ ಎಮ್ಮ ಹೃದಯದಿ ।
ನಿತ್ಯವೂ ಬೆಳೆದಿರುತಿರೆ ॥
ನಿಂದೆ ದ್ವೇಷವ ಎಂದಿಗಾದರು ।
ಮರೆತು ಜಗದಲಿ ಮಾಡದೆ ॥
'ದಿವ್ಯ' ಜೀವನವೆಂಬ ಜೀವನ ।
ಅದುವೆ ನಿತ್ಯವು ಶಾಶ್ವತ ॥
ಜಗದ ಗುರುವೇ ಆನಂದ ದಾತನೆ ।
ನಿನ್ನ ನೆನಪದು ಶಾಶ್ವತ ॥
ಸ್ವಾಮಿ ದೇವನೆ ಶಿವಾನಂದನೆ ॥
ಪರಮ ಸದ್ಗುರು ಪಾಲಿಸು ॥
ಧ್ಯಾನ ರೂಪನೆ ಗಾನ ಪ್ರಿಯನೇ ।
ಸರ್ವ ಶಕ್ತನೆ ರಕ್ಷಿಸು ॥

## ದೈನ್ಯದಲಿ ಈಶನನು

ದೈನ್ಯದಲಿ ಈಶನನು ।
ದಿನ ನೆನೆಯಬೇಕು ।
ತಂದೆ-ತಾಯಿಯ ಸೇವೆ ।
ನಾವ್ ಮಾಡಬೇಕು ।
'ನಾನೆಂಬ' ಅಹಂಕಾರವನು ।
ಅಳಿಸಬೇಕು ।
ಭವ ಸಾಗರವನ್ನು ।
ನಾವ್ ದಾಟಲೇಬೇಕು ।
ಮನುಜ ದೇಹದೊಳಿದ್ದು ।
'ಮಾಧವ' ರಾಗ ಬೇಕು ।
ಬಡವರಲಿ ಕರುಣೆಯನು ।
ನಾವ್ ತೋರಬೇಕು ।
ಸರ್ವವೂ ಶಿವ ರೂಪ ।
ವದು ಅಹುದು ಸತ್ಯ ।
ಶಿವನೊಬ್ಬನೇ ನಮ್ಮ ।
ಸಲಹುವನು ನಿತ್ಯ ।
ಏನು ನೆನೆಯುವೆ ನೀನು ।
ಶಿವ ನಿನ್ನ ಮಾಳ್ಪ ।
ಧರ್ಮವನು ರಕ್ಷಿಸಿದಡೆ ।
ಅವ ಪಥವ ತೋರ್ಪ ।
'ಕರ್ಮಫಲ' ಹಿಂದಿನದು ।
ಬೆನ್ನ ಬಿಡೆ ನಿನ್ನ ।
ಶಿವ ಸ್ತುತಿಯು ಸಾಕೊಂದೆ ।
ಪಡೆ ಮೋಕ್ಷವನ್ನ ।



## ಗಿಡ ಕಲ್ಲು ವೃಕ್ಷದಲಿ

ಗಿಡ ಕಲ್ಲು ವೃಕ್ಷದಲಿ ।
ಗಿರಿ ನೀರು ಗಾಳಿಯಲಿ ।
ನಂಬಿದರ ಹೃದಯದಲಿ ಶಿವನು ನೆಲೆಸಿರುವ ।
ಬಡವ ಸಿರಿವಂತರಲಿ ।
ಭಕ್ತರಾ ಬಳಿಯಲ್ಲಿ ।
ಅಚ್ಯುತನು ಜೊತೆಯಲ್ಲಿ ನಗು ನಗುತ ಬರುವ ।
ಅಗಸದಲಿ ರವಿಯಾಗಿ ।
ಪೃಥ್ವಿಯಲಿ ನರನಾಗಿ ।
ಯುಗ ಯುಗದಿ ಅವತಾರವೆತ್ತಿ ತಾ ಬರುವ ।
ನೆನೆದವರ ಕಾವುತ್ತ ।
ಭಕುತರನು ಪೊರೆಯುತ್ತ ।
ಅನವರತ ಜಗದಲ್ಲಿ ಸಲಹುತ್ತಲಿರುವ ।
ಬ್ರಹ್ಮ ಜನರೆಲ್ಲರಲಿ ।
ಧರ್ಮವಿರುವವರಲ್ಲಿ ।
ದೇವ-ಲೋಕದ ಸೇವೆ ಮಾಡಿಸುತಲಿರುವ ।
ಕಷ್ಟ-ಕಾರ್ಪಣ್ಯದಲಿ ।
ಸುಖ ದುಃಖವೆರಡಲಿ ।
ದೇವ ಭಕುತರ ಕೈಯ ಹಿಡಿಯುತಲಿ ನಡೆವ ।
ಸಾಧುಸಂತರ ಹೃದಯ ।
ಮಂದಿರದ ಗುಹೆಯಲ್ಲಿ ।
ಮೋದದಲಿ ನಿತ್ಯವೂ ಅವನೆಲಸಿ ಇರುವ ।
ಧರ್ಮವದು ನಶಿಸುತಿರೆ ।
ರಕ್ಷಿಸಲು ಅವ ನಿತ್ಯ ।
ಅವತಾರ ಎತ್ತಿ ತಾ ಯುಗಯುಗದಿ ಬರುವ ।

## ಕಾಲಿಗೊಂದು ಕಲ್ಲು ತಲುಗೆ

ಕಾಲಿಗೊಂದು ಕಲ್ಲು ತಲುಗೆ ।
ದೇವ ದೇವ ರೆಂಬೆವು ।
ಕೈಗೆ ಕತ್ತಿಯೊಂದು ತಲುಗೆ ।
ದೇವರಯ್ಯೋ ಎಂಬೆವು ।
ಮಳೆಯು ಬೀಳದಿರಲು ।
ದೇವ-ದೇವ ರಕ್ಷಿಸೆಂಬೆವು ।
ಸಿಡಿಲು, ಗಾಳಿ ಭರದಿ ಬರಲು ।
ಹೆದರಿ ಸ್ತುತಿಯ ಮಾಳ್ಪೆವು ।
ರೋಗ ತಗುಲಿ ನೋಯುವಾಗ ।
ದೇವರನ್ನು ಕರೆವೆವು ।
ಹೊಟ್ಟೆ ನೋವು ಬಂದ ರಾಗ ।
ಅಯ್ಯೋ ದೇವನೆಂಬೆವು ।
ಚರ್ಚೆ ವಾದವೆಲ್ಲರಲ್ಲಿ ।
ದೇವನೆಲ್ಲಿ ? ಎಂಬೆವು ।
ನ್ಯಾಯ ಧರ್ಮವೆಲ್ಲರಲ್ಲಿ ।
ದೇವರನ್ನು ಮರೆವೆವು ।
ಸುಳ್ಳು ಆಣೆಗಳನು ನಾವು ।
ದೇವನಲ್ಲಿ ಇಡುವೆವು ।
ಪೊಳ್ಳು ಮಾತುಗಳನು ಆಡಿ ।
ದೇವನನ್ನು ನಾವು ಕಾಣೆವು ।
ಸಕಲ ಪ್ರಕೃತಿ ರೂಪದಲ್ಲಿ ।
ದೇವ ನೆಲಸಿ ಇರುವನು ।
ಜ್ಞಾನ ಕಣ್ಣು ತೆರೆದರಾಗಿ ।
ತಾನು ರೂಪ ತೋರ್ವನು ।



## ಇಟ್ಟ ಗುರಿಯನು ನೀನು

ಇಟ್ಟ ಗುರಿಯನು ನೀನು ।
ದಿಟ್ಟತನದಿಂದಲೇ ।
ನಿತ್ಯ ತಲುಪಲು ಬೇಕು ಭರತ ಕುವರ ॥
ಗಟ್ಟಿಯಾಗಿರು ನೀನು ।
ಜಟ್ಟಿಯಾ ಎದುರಲ್ಲಿ ।
ಮುಟ್ಟಿ ನೋಡದೆ ನಿನ್ನ ನಮಿಸುವನು ಕುವರ ॥
ನಯವಿನಯವಿರಬೇಕು ।
ಭಯಭಕ್ತಿ ಬರಬೇಕು ।
ಶಿವನಲ್ಲಿ ನಿನ್ನೊಲವು ಇರಬೇಕು ಕುವರ ॥
ಕತ್ತು ಹೋದರು ನೀನು ।
ಸತ್ಯದಿಂದಿರಬೇಕು ।
ಭಾರತದಿ ನೀನಿಂದು ಪುಟ್ಟಿರುವೆ ಕುವರ ॥
ಕಷ್ಟದಲಿ ಇಷ್ಟದಲಿ ।
ಸೋಲಿನಲಿ ಗೆಲುವಿನಲಿ ।
ಎಂದೆಂದಿಗೂ ನೀ ಕುಂದದಿರಬೇಕು ಕುವರ ॥
ಗಿಡದಲ್ಲಿ ಮರದಲ್ಲಿ ।
ಪ್ರಾಣಿಪಕ್ಷಿಗಳಲ್ಲಿ ।
ಮಾಡಬಾರದು ಹಿಂಸೆ ಓ ನನ್ನ ಕುವರ ॥
ಕ್ರೈಸ್ತ ಮುಸ್ಲಿಮರೊಂದೆ ।
ಹಿಂದು ಜೈನರು ಒಂದೆ ।
ಭರತ ಮಾತೆಯ ಸುತರ ನಾವೆಲ್ಲ ಕುವರ ॥
ಧರ್ಮವಧಿಕವು ಅಹುದು ।
ಕರ್ಮಗಳು ಅಂತಿಹುದು ।
ದೇವನೊಬ್ಬನೆ ಶಿವನು ಇದು ಸತ್ಯ ಕುವರ ॥
ರಾಮ-ಕೃಷ್ಣರು ಇಲ್ಲಿ ।
ಗಾಂಧಿ ಗೌತಮರಿಲ್ಲಿ ।
ಪುಟ್ಟಿಹರು ಸತ್ಯವನ್ನು ತಿಳಿಸಿಹರು ಕುವರ ॥
ಅವರ ಮಾತಿನ ತೆರದಿ ।
ನಡೆಯುತಿರೆ ಈ ನೆಲದಿ ।
ಪಡೆವೆ ನಿತ್ಯವು ಶಾಂತಿ ಓ ನನ್ನ ಕುವರ ॥

## ಪಟ್ಟ ಮಡೆಯಲಿ ಜನಿಸಿ

**॥ ಓಂ ಶ್ರೀ ಶಿವಾನಂದಾಯ ನಮಃ ॥**

ಪಟ್ಟ ಮಡೆಯಲಿ ಜನಿಸಿ ।
ಹೃಷಿಕೇಶದಲಿ ನೆಲೆಸಿ ।
ಜ್ಞಾನವನು ನೀಡಿರುವ ಪರಮ ಗುರುನಾಥ ॥
ಎನ್ನ ಹೃದಯದಿ ನೆಲಸಿ ।
ಅನವರತ ರಕ್ಷಿಸುವ ।
ಓ ಗುರವೇ ನೀನೇ ನನ್ನ ಭಾಗ್ಯದಾತ ॥
ನೀನು ಬ್ರಹ್ಮನು ।
ಜಗಕೆ ಜ್ಞಾನವ ಸುರಿದೆ ।
ದೀನ ಜನರೆಲ್ಲರನು ಬೆಳಕೆಡೆಗೆ ಎಳೆದೆ ॥
ಸತ್ಯವನು ಏನೆಂದು ? ।
ನೀ ನಿಳೆಗೆ ವಿಸ್ತರಿಸಿ ।
"ದಿವ್ಯ ಜೀವನ" ವೃಕ್ಷದಡಿಯಲ್ಲಿ ಪೊರೆದೆ ॥
ಮಕ್ಕಳಾಗಿಹ ನಮ್ಮ ।
ತಪ್ಪುಗಳ ತಿದ್ದುತಲಿ ।
ದಿವ್ಯ ಜೀವನ ದಡಿಗೆ ಕೈಹಿಡಿದು ಒಯ್ದೆ ॥
ಅನವರತ ಪ್ರೇಮದಲಿ ।
ಕಾಪಾಡು ನೀನೆಮ್ಮ ।
ಶಿವಾನಂದ ಸ್ವಾಮಿಯೇ ನೀ ಅಭಯ ನೀಡು ॥



## ಹೆಣ್ಣು ಹೆಣ್ಣೆಂದೇಕೆ ? ಕಣ್ಣರಳಿ ನೋಡುತಿಹೆ ?

ಹೆಣ್ಣು ಹೆಣ್ಣೆಂದೇಕೆ ? ಕಣ್ಣರಳಿ ನೋಡುತಿಹೆ ?
ಇಹುದಲ್ಲಿ ಹೊಲಸು ತುಂಬಿದ ಒಂದು ಚೀಲ ।
ಮೂಳೆಗಳು, ಮಾಂಸಗಳು, ರಕ್ತ, ಮಲ, ಮೂತ್ರಗಳು ।
ಏನಿಲ್ಲ ಅದರೊಳಗೆ । ಮಾಯೆಯಾ ಭವ್ಯ ಜಾಲ ॥
ಬಳುಕುತಿಹ ದೇಹವದು ಕಿರು ನಗೆಯ ಮೊಗವಿಹುದು ।
ಕರಿನಾಗ ವಿಷ ತುಂಬಿ ಹಿಂದೆ ನಿಂತಿಹುದು ।
ಬೆಡಗು ಭಿನ್ನಾಣದಲಿ ನಕ್ಕು ಒಲಿಸುವಳವಳು ।
ಸಿಕ್ಕರೇ ಕೊಕ್ಕರೆಯು ಕೊಕ್ಕಿ ನುಂಗುವಳು ।
ದಾಸನಾಗುವೆ ನೀನು ಮೋಸ ಹೋಗುವೆ ನೀನು ।
ಹೊಲಸು ದೇಹದ ಅಪ್ಪುಗೆಯ ನೀನು ನೆನೆವೆ ।
ಸರ್ವವನು ನೀ ಮರೆವೆ ಮಾಯೆಯೊಳು ನೀನಿಳಿವೆ ।
ಬಿಡಿಸಲಾರದೆ ಮುಂದೆ ತೊಳಲಾಡುವೆ ।
ಹೆಣ್ಣು ಹಣ್ಣೆಂದೇಕೆ ಚಿಣ್ಣ ನೀ ಮೈಮರೆವೆ ?
ಇರಿಸು ಈ ಪ್ರೇಮವನು ನಿತ್ಯ ಶಿವನಲ್ಲಿ ।
ಪಡೆವೆ ನಿತ್ಯವು ಶಾಂತಿ ಸವಿವೆ ಆನಂದವನು ।
ಮೂರು ನಿಮಿಷದ ಸುಖದ ಆಸೆ ನಿನಗೇಕೆ ?
ನಾರುವಾ ಮಲ ಮೂತ್ರ ಕೂಪದೊಳು ನೀ ಬಿದ್ದು ।

ನೊಣದಂತೆ ಶಕ್ತಿಯನು ಕಳೆವೆ ನೀನೆಲ್ಲ ।
ಶಕ್ತಿಗುಂದಲು ನಿನ್ನ ಸುಂದರಿಯು ಕಡೆಗಣಿಸಿ ।
ಯುಕ್ತಿಯಿಂದಲಿ ಬಿಡಿಸಿ ಮಾಯವಾಗುವಳು ।
ಆ ಮೇಲೆ ನೀನವಳ ಮೋಸವನು ನೀ ತಿಳಿವೆ
ಹೃದಯ ವೇದನೆಯಿಂದ ನೀನಂದು ಅಳುವೆ ।
ಎಲೆ ಮಗುವೆ ಜೋಕೆ ಕಿರು ನಗೆಯು ಬೇಕೆ ?
ನಾರಿಯೊಳು ಜೋಕೆಯಿಂದಲಿ ಮಾತನಾಡು
ಸಾನುರಾಗದಿ ನಮಿಸಿ ನೀ ಕೈಯ ಮುಗಿದು ।
ಹೊಲಸು ಜೀವನದಲ್ಲಿ ಸುಖವು ಇಹುದೆಲ್ಲಿ?
ಅಳಿಸು ನೀ ಮನದೊಳಿಹ ಕಾಮವಾಸನೆಯ
ಹರಿಯ ಪಾದದಲಿ ನೀ ಮನವಿರಿಸುತಿಲ್ಲೀ
ಭಕ್ತಿಯಲಿ ಆತನನು ನಿತ್ಯ ಸೇವಿಸುತಲೀ ।
ಜಪ, ತಪವು ಮಾರ್ಗ ಒಂದೇ ಇಹುದು ಇದಕೆ
ಇದ ತಿಳಿದು ಮುದದಿಂದ ನಡೆ ಮುಂದಕೆ ಜೋಕೆ ।
ಸತ್ಯವದು ಏನೆಂದು ನೀ ನಿಲ್ಲಿ ತಿಳಿದು
ಮುಕ್ತಿಯನು ಪಡೆಯುತ್ತ ಯಾತ್ರೆ ಮುಗಿಸಿಂದೇ
ಭಜಿಸು ನಿತ್ಯವು ಹರಿಯ ನಾಮವನು ಜಪಿಸು
ಕರ್ಮವನು ಮುಗಿಸಿ ನೀ ಶಾಂತಿಯಲಿ ನೆಲೆಸು ।



## ದೇವ ದೇವನೆ ಶಿವಾನಂದನೆ

**॥ ಓಂ ಶ್ರೀ ಶಿವಾನಂದಾಯ ನಮಃ ॥**

ದೇವ ದೇವನೆ ಶಿವಾನಂದನೆ ।
ದೀನರೆಲ್ಲರ ಪೊರೆವದಾತನೆ ।
ಬಾಗಿ ನಮಿಪೆವು ನಿನ್ನ ಚರಣಕೆ ನೀನೆ ರಕ್ಷಿಸು ದೇವನೆ ॥
ಯೋಗ ಮಾರ್ಗವ ಎಲ್ಲ ತಿಳಿಸಿದೆ ।
ಕೈಯ ಹಿಡಿಯುತ ನೀನು ಕಲಿಸಿದೆ ।
ಸಾಗಿಸಿದೆ ನೀ ನಮ್ಮ ನಿತ್ಯವು ಶಾಂತಿ ವೃಕ್ಷದಡಿ ।
ಸತ್ಯವನು ನೀ ಬಿಚ್ಚಿ ಹೇಳಿದೆ ।
ಮುಚ್ಚಿರುವ ಬಾಗಿಲನು ತೆರೆಸಿದೆ ।
ಬಚ್ಚಿರುವ ದೈವ ಗುಟ್ಟನು ಬಿಚ್ಚಿ ಜಗಕೆರೆದೆ ।
ದಿವ್ಯ ಜೀವನ ಎಂಬ ಮರದಡಿ ।
ಭವ್ಯ ಆಸರೆ ನೀಡಿ ಎಮ್ಮನು ।
ಸವ್ಯಸಾಚಿಯ ಕಾಯ್ದ ಕೃಷ್ಣನ ತೆರದಿ ನೀ ಪೊರೆದೆ ॥
ದೇವರೊಬ್ಬನೆ ಎಂದೆ ಜಗದಲಿ ।
ಧರ್ಮ ಒಂದೇ ಇಹುದು ಜಗದಲಿ ।
ಅದುವೆ "ಮಾನವ ಧರ್ಮ" ವಾಗಿಹುದೆಂದು ನೀನೆಂದೆ ॥
ಸೇವೆ, ಪ್ರೀತಿಯು, ದಾನ, ಸ್ವಚ್ಛತೆ ।
ಯಿಂದ ಧ್ಯಾನವ ಮಾಡುತಿರೆ ನಿತ್ಯವು ।
ಗುರಿಯ ತಲುಪುತ ಪಡೆವೆ ದೇವರ ಸತ್ಯ ನೀನೆಂದೆ ॥

# ಓ ಅಮ್ಮ ಭಗವತಿಯೆ ನೀ ರಕ್ಷಿಸಮ್ಮ

॥ ಓಂ ಹ್ರೀಂ ಕ್ಲೀಂ ಚಾಮುಂಡಾಯ್ಯೈವಿಚ್ಛೈ ನಮಃ

ಓ ಅಮ್ಮ ಭಗವತಿಯೆ ನೀ ರಕ್ಷಿಸಮ್ಮ ।
ಓ ಕಾಳಿ, ದುರ್ಗೆಯೇ ಪೊರೆಯು ನೀನಮ್ಮ ।
ಕೊಲ್ಲೂರು ಕ್ಷೇತ್ರದಲ್ಲಿ ಮೂಕಾಂಬಿಕೆಯು ನೀನೇ ।
ಕಲಕತ್ತೆಯಲಿ ಕಾಳಿ ಮಾತೆ ನೀನಮ್ಮ ॥
ಚೋಟನೀ ಕೆರೆಯಲ್ಲಿ ಭಗವತಿಯು ಜನನಿ ।
ಕಾಂಚಿಯಲಿ ಕುಳಿತಿರುವ ಕಾಮಾಕ್ಷಿ ನೀನೇ ।
ಮಧುರೆಯಲಿ ಮೋಹದಾ ಮೀನಾಕ್ಷಿ ನೀನೇ ।
ಶೃಂಗ ಗಿರಿಯಲಿ ನೀನು ಶಾರದೆಯು ಅಮ್ಮಾ ॥
ವೈಷ್ಣವೀ ಕ್ಷೇತ್ರದಲಿ ವೈಷ್ಣವಿಯು ನೀನೆ ।
ಲಂಕೆಯಲಿ ನೀನಮ್ಮ ಶಾಂಕರೀ ಸತ್ಯ ॥
ಕ್ರೌಂಚದ್ವೀಪಲಿ ನೀ ಚಾಮುಂಡಿಕೇ ಅಮ್ಮ ।
ಆಲಂಪುರದಲಿ ನೀನು ಜೋಗುಳಾಂಬಾ ।
ಚಿತ್ರೆ ಕೂಟದಲಿ ನೀ ಮಾಣಿಕ್ಯ ದೇವೀ ॥
ಹಿಂಗುಳದಲಿ ನೀನು ಐಂಕಾರಿಯಮ್ಮ ।
ಕಾಶಿ ಕ್ಷೇತ್ರದಲಿರುವ ವಿಶಾಲಾಕ್ಷಿಯು ನೀನಮ್ಮ ।
ಶ್ರೀ ಶೈಲದಲಿ ನೀನು ಭ್ರಮರಾಂಬೆಯು ।
ಎಲ್ಲೆಲ್ಲೂ ನೀನಿರುವೆ ನೀ ಆದಿ-ಶಕ್ತಿಯು ।
ಎಲ್ಲರನು ನೀಪೊರೆದು ರಕ್ಷಿಸಮ್ಮಾ ॥



# ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಕೃಷ್ಣನೇ

॥ ಓಂ ಶ್ರೀ ಕೃಷ್ಣಾಯ ನಮಃ ॥

ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಕೃಷ್ಣನೇ
ಕೊಳಲನೂದುತ ಎಮ್ಮ ಮೋಹಿಪ ದೇವನೇ ಶ್ರೀಕೃಷ್ಣನೇ ॥1॥

ದಿನವು ನಿತ್ಯವು ನಿನ್ನ ನಾಮವು ಎಮ್ಮ ಬಾಯಲಿ ನಲಿಯಲಿ
ಎನ್ನ ನಾಲಿಗೆ ನಿನ್ನ ನಾಮವ ಜನುಮ ಜನುಮವು ಜಪಿಸಲಿ ॥2॥

ಎನ್ನ ಕಂಗಳು ನಿನ್ನ ರೂಪವ ನಿತ್ಯ ನೋಡುತ ನಲಿಯಲಿ
ಎನ್ನ ಕಿವಿಗಳು ನಿನ್ನ ಕೀರ್ತನೆ ಭಕ್ತಿಯಿಂದಲಿ ಕೇಳಲಿ ॥3॥

ಎನ್ನ ಕೈಗಳು ನಿನ್ನ ಸೇವೆಯ ನಿತ್ಯವೂ ನಿಜ ಮಾಡಲಿ
ಎನ್ನ ಕಾಲ್ಗಳು ನಿನ್ನ ಕಾಣಲು ನಡೆದು ಮುಂದಕೆ ಸಾಗಲಿ ॥4॥

ಕೃಷ್ಣ ನೀನೆ ಎನಗೆ ಬಂಧುವು ಕೃಷ್ಣ ನೀನೇ ಸರ್ವವು
ಯಾರು ಇಲ್ಲದ ನಿನ್ನ ಸುತನನು ತಂದೆ ನೀನೆ ರಕ್ಷಿಸು ॥5॥

ಭಕ್ತಿ ಒಂದೇ ಎನಗೆ ನೀಡುತ ಮುಕ್ತಿ ಪಥವನು ತೋರಿಸಿ
ಮನುಜ ದೇಹವ ನಿತ್ತು ನಿತ್ಯವು ನಿನ್ನ ಕೀರ್ತನೆ ಹಾಡಿಸು ॥6॥

ಕಲಿಯ ರಾಜ್ಯದಿ ನಿನ್ನ ಮಕ್ಕಳ ಕರುಣೆದೋರುತ ರಕ್ಷಿಸು
ಕುಂದನೆಲ್ಲವ ಕಂದರೆನ್ನುತ ಕ್ಷಮಿಸಿ ನಿತ್ಯವು ಪಾಲಿಸು ॥7॥

ದೇವ ದೇವನೆ ಲೋಕ ಪಾಲನೆ ಈಶನೆ ಜಗದೀಶನೇ
ಕೃಷ್ಣ ಕೃಷ್ಣನೇ ವಾಸುದೇವನೆ ಸರ್ವ ಲೋಕ ಹಿತದಾತನೇ ॥8॥

ಉಡುಪಿ ಕ್ಷೇತ್ರದಿ ಕನಕ ಕಿಂಡಲಿ ಇಣಿಕಿ ನೋಡಲು ಕಾಣುವೆ
ಬಂದು ದರುಶನ ಮಾಳ್ಪಜನಗಳ ಕುಂದನೆಲ್ಲವ ಕಳೆಯುವೆ ॥9॥

ಮುದ್ದು ಕೃಷ್ಣನೆ ಬಾಲಕೃಷ್ಣನೆ ಪ್ರೇಮ ಕೃಷ್ಣನೆ ರಕ್ಷಿಸು
ಧರ್ಮ ನಶಿಸುವ ಕಲಿಯ ರಾಜ್ಯದಿ ಒದ್ದು ಕಲಿಯನು ಓಡಿಸು

## ಕೊಲ್ಲೂರ ಹೇ ದೇವಿ ಮೂಕಾಂಬಿಕೇ

### ॥ ಓಂ ಶ್ರೀ ಮೂಕಾಂಬಿಕಾಯೈ ನಮಃ ॥

ಕೊಲ್ಲೂರ ಹೇ ದೇವಿ ಮೂಕಾಂಬಿಕೇ ।
ಮೂಕಾಂಬಿಕೆ ಜನನಿ ಹೇ ಅಂಬಿಕೇ ।
ಮೂಕಾಂಬಿಕೇ ಮೂಕಾಂಬಿಕೇ ಮೂಕಾಂಬಿಕೇ ದೇವಿ ಜಗದಂಬಿಕೆ ॥
ಎನಗಿಲ್ಲಿ ಯಾರಿಲ್ಲ ನೀನೊಬ್ಬಳೇ ರಕ್ಷೆ ।
ಎನದಿಲ್ಲ ಏನಿಲ್ಲ ನಿನ್ನೊಬ್ಬಳದೇ ಎಲ್ಲ ।
ಬಂಧುವೂ ನೀನೆನಗೆ ಬಳಗವು ನೀನೆನಗೆ ।
ತಂದೆಯು ನೀನೆನಗೆ ತಾಯಿಯು ನೀನೆನಗೆ ।
ಮೂಕಾಂಬಿಕೇ ಮೂಕಾಂಬಿಕೇ ಮೂಕಾಂಬಿಕೇ ದೇವಿ ಜಗದಂಬಿಕೆ ॥
ಕಲಿಯುಗದ ಕತ್ತಲಲಿ ನಡೆಯುತಿಹೆ ನಮ್ಮಾ ।
ಎಡ ಬಲದಿ ಕಾಯುತ್ತ ರಕ್ಷೆ ನೀಡಮ್ಮ ।
ಕಂಗಳಿಗೆ ನೀ ನಿನ್ನ ರೂಪ ತೋರಮ್ಮಾ ।
ಹೃದಯದಲಿ ನೀ ನಿತ್ಯ ಬಂದು ನೆಲಸಮ್ಮಾ ।
ಮೂಕಾಂಬಿಕೇ ಮೂಕಾಂಬಿಕೇ ಮೂಕಾಂಬಿಕೇ ದೇವಿ ಜಗದಂಬಿಕೆ ॥
ಕಣ್ತೆರೆದು ನೋಡಿದರೆ ನೀನು ನಗುತಲರುವೆ ।
ಬಾಯ್ತೆರೆದು ಹಾಡಿದರೆ ಓಡೋಡಿ ಬರುವೆ ।
ಅಮ್ಮ ಎಂದರೇ ನೀನು ಎನ್ನ ಅಪ್ಪಿ ಪೊರೆವೆ ।
ನಿನ್ನ ಪಾದದ ಬಳಿಗೆ ಅನವರತ ಕರೆವೇ ।
ಮೂಕಾಂಬಿಕೇ ಮೂಕಾಂಬಿಕೇ ಮೂಕಾಂಬಿಕೇ ದೇವಿ ಜಗದಂಬಿಕೆ ॥
ಎಲ್ಲಿ ಹೋದರು ನೀನು ರಕ್ಷೆಯನು ನೀಡಿ ।
ಕಣ್ಣ ರೆಪ್ಪೆಯ ತೆರದಿ ಎನ್ನ ನೀ ಕಾಯ್ದೆ ।
ಎನ್ನ ನಾಲಿಗೆ ಮೇಲೆ ನೀ ಕುಣಿಯುತಿರುವೆ ।
ಹೃದಯ ದೇಗುಲದಲ್ಲಿ ನಿತ್ಯ ನೀನಿರುವೆ ।
ಮೂಕಾಂಬಿಕೇ ಮೂಕಾಂಬಿಕೇ ಮೂಕಾಂಬಿಕೇ ದೇವಿ ಜಗದಂಬಿಕೆ ॥



ಕೋಲಮುನಿಗಂದು ನೀ ದರುಶನವನಿತ್ತೆ ।
ಶಂಕರನಿಗೆ ನೀನೊಲಿದು ಜ್ಞಾನವನು ಇತ್ತೆ ।
ಮೂಕಾಸುರನಿಗೆ ನೀನೊಲಿದು ಮೋಕ್ಷವನು ಇತ್ತೆ ।
ಕೊಲ್ಲೂರು ಕ್ಷೇತ್ರದಲಿ ನೀ ಬಂದು ಕುಳಿತೆ ।
ಮೂಕಾಂಬಿಕೇ ಮೂಕಾಂಬಿಕೇ ಮೂಕಾಂಬಿಕೇ ದೇವಿ ಜಗದಂಬಿಕೆ ॥
ನಯನಗಳು ತುಂಬಿಹುದು ನಿನ್ನ ರೂಪದಲಿ ।
ನಾಲಿಗೆಯ ಚಲಿಸುವುದು ನಿನ್ನ ನಾಮದಲಿ ।
ಓಡೋಡಿ ಬಂದೆ ನಾ ನೀಕರೆಯುತಿಲ್ಲಿ ।
ಅಮ್ಮ ಅಮ್ಮಾ ಎಂದು ನಿನ್ನ ಬಳಿಗಿಲ್ಲಿ ।
ಮೂಕಾಂಬಿಕೇ ಮೂಕಾಂಬಿಕೇ ಮೂಕಾಂಬಿಕೇ ದೇವಿ ಜಗದಂಬಿಕೆ ॥
ಜನುಮಗಳು ಹಲವೆತ್ತಿ ಸಾಕಾಯ್ತು ಎನಗೆ ।
ಮೂಕಾಂಬಿಕೇ ನೀಡು ಭಕ್ತಿ ನೀ ಎನಗೆ ।
ಜನುಮ ಮರಣಗಳೆಂಬ ಸಂಸಾರದಿಂದ ।
ಬಿಡಿಸು ಜನನಿ ನೀ ಹೇ ಅಭಯದಾಯಿನಿ ।
ಮೂಕಾಂಬಿಕೇ ಮೂಕಾಂಬಿಕೇ ಮೂಕಾಂಬಿಕೇ ದೇವಿ ಜಗದಂಬಿಕೆ ॥

॥ ಓಂ ಶ್ರೀ ಮೂಕಾಂಬಿಕಾಯೈ ವಿದ್ಮಹೇ ಶಿವಶಕ್ತ್ಯೈ ರೂಪಿಣ್ಯೈ
ಧೀಮಹೀ ತನ್ನೋಆದಿಶಕ್ತ್ಯೈ ಪ್ರಚೋದಯಾತ್ ॥

## ವಾಣಿ ವೀಣೆಯ ಪಿಡಿದು

॥ ಓಂ ಐಂ ಸರಸ್ವತ್ಯೈ ನಮಃ ॥

ವಾಣಿ ವೀಣೆಯ ಪಿಡಿದು ।
ಕುಳಿತಿಹಳು ನೋಡು ।
ಹಂಸವಾಹನೆಯಾಗಿ ।
ಕುಳಿತಿಹಳು ನೋಡು ।
ಬಲಗೈಯೊಳಿಹುದೊಂದು ।
ಜಪ ಸರದ ಮಾಲೆ ।
ಎಡಗೈಯೊಳಿಹುದೊಂದು ।
ಓಲೆ ಪುಸ್ತಕವು ।
ಎಡಗಾಲ ಮೇಲೆ ।
ಬಲಗಾಲ ನಿಟ್ಟಿಹಳು ।
ವೀಣೆಯಲಿ ಸರಿಗಮವ ।
ತಾ ನುಡಿಸುತಿಹಳು ।
ಮಂದಹಾಸವು ಮೊಗದಿ ।
ತುಂಬಿಹುದು ನೋಡು ।
ನೀನವಳ ಚಂದವನು ।
ಕಂಡು ಕೊಂಡಾಡು ।
ಏ ಅಮ್ಮ ಶಾರದೆಯೆ ।
ನೆಲೆಸೆನ್ನ ಮನದಿ ।
ಅನವರತ ಕೃಪೆದೋರಿ ।
ಹರಸೆನ್ನ ಮುದದಿ ।



## ಕೈಲಿ ಲೇಖನಿ ಹಿಡಿದು

ಕೈಲಿ ಲೇಖನಿ ಹಿಡಿದು
ಮನೆಜಗಲಿ ಮೇಲೆಂದು
ಖಾಲಿ ಪುಸ್ತಕವಿಟ್ಟು ನಾನು ಕುಳಿತ್ತಿದ್ದೆ
ಸವಿ ಕವಿತೆ ನಾನೊಂದು
ಬರೆಯ ಬೇಕಿಂದೆಂದು
ಮನದಿ ಮನನವ ಮಾಡಿ ಅಲ್ಲಿ ಕುಳಿತ್ತಿದ್ದೆ
ಕರುವು "ಅಂಬಾ" ಎಂದು
ಕೊಟ್ಟಿಗೆಯ ಒಳಗಿಂದ
ಕರೆಯುತ್ತಿದ್ದುದ ನಾನು ಅಂದು ಆಲಿಸಿದೆ
ನೆರೆಮನೆಯ ಕಿರುನಗೆಯ
'ಪುಟ್ಟು' ಅಮ್ಮಾ ! ಎಂದು
ಅಳುತಲಿದ್ದುದ ನಾನು ಕಿವಿಗಳಲಿ ಕೇಳ್ದೆ
ಶಿವನ ದೇಗುಲದಲ್ಲಿ
ಶಂಖನಾದವು ಅಂದು
ದೂರದಿಂದಲೇ ನನಗೆ ಕೇಳಿ ಬರುತಿತ್ತು
ತಂಬುರಿಯ ನಾದದಲೆ
ಕೀರ್ತನೆಯ ಮೆರವಣಿಗೆ
ಮನೆಯ ಬಳಿಯಿಂದಲೇ ಸಾಗಿ ಬಂದಿತ್ತು
ದೇವ ದೇವನ ನಾಮ
ಕೇಳುತಲೇ ನಾನಂದು
ಭಾವನೆಯ ನೆನಪಲ್ಲೇ ಬರೆಯುವುದ ಮರೆತೆ
ಭಗವಂತ ನಾಮವನು
ಮನದಲಿ ನೆನೆಯುತಲಿ
ಭಕ್ತಿ ಭಾವದಿ ನಾನು ಮೈ ಮರೆತು ನಿಂತೆ
ಅಮ್ಮನೊಳಗಿಂದದು
'ಕೃಷ್ಣಾ' ನೀ ಬಾ ಎಂದು
ಕರೆದುದನು ಕೇಳಿಯೇ ನಾನಂದು ಎದ್ದೆ
ಬರೆದೆನಾ ಬರೆಯದಾ
ಖಾಲಿ ಪುಸ್ತಕ ಕವಿತೆ
ಬರೆದಲ್ಲಿ ಗಾನವದು ಕವಿ ಬರೆಯುವಂತೆ

## ಪೂಜಿಸಲು ಬಂದಿರುವೆ ಪೂಜಾಲಯಕ್ಕೆ

॥ ಓಂ ನಮೋ ನಾರಾಯಣಾಯ: ॥

ಪೂಜಿಸಲು ಬಂದಿರುವೆ ಪೂಜಾಲಯಕ್ಕೆ
ಜ್ಞಾನ-ಭಕುತಿಯನಿಂದು ನಾ ಬೇಡಲಿಕ್ಕೆ
ತಂದಿಲ್ಲ ಹೂ-ಹಣ್ಣು ನಾನಿಂದು ತಂದೆ
ಎನ್ನ ಜೀವನಕ್ಕಿರುವ ಜ್ಯೋತಿ ನೀನೊಂದೆ
ಜಪ-ಮಂತ್ರ ತಿಳಿದಿರುವ ಪಾರ್ವ ನಾನಲ್ಲ
ಧ್ಯಾನ-ಸಾಧನೆಗಳನು ನಾನು ಮಾಡಿಲ್ಲ
ಕೊಂಬು ವಾದ್ಯಗಳೊಂದು ನನಗೆ ಅರಿತಿಲ್ಲ
ನಿನ್ನ ಕೀರ್ತನೆ ಹಾಡಲೆನಗೆ ಧ್ವನಿ ಇಲ್ಲ
ಅರಿತಿರುವೆ ಜಗದೊಡೆಯ ನೀ ನಿತ್ಯವೆಂದು
ಪಾರ್ವತೀ ಪತಿ ನೀ ಪರಮೇಶನೆಂದು
ಸಂಸಾರ ಸಾಗರದಿ ನೀ ಮಾಡು ಪಾರು
ಈ ನಿನ್ನ ಕಂದನಲಿ ಕರುಣೆಯನು ತೋರು
ಜಗದೊಳಗೆ ಚಿನ್ನದಾ ಹೃದಯವನು ತುಂಬು
ಜನಗಳಾ ಮನದೊಳಗೆ ಭಕ್ತಿಯನು ತುಂಬು
ಕಲಿಯುಗದಿ ನೀನೊಮ್ಮೆ ನಮ್ಮ ಕರೆ ಕೇಳು
ಓಡೋಡಿ ಕಂಗೆಟ್ಟ ನಮ್ಮನ್ನು ಮಾಡು ಪಾರು
ಸತ್ಯದಾ ಸತ್ಯ ಯುಗವನು ಬೇಗ ಬರಿಸು
ಸತ್ಯವಂತರ ನೀನು ಅನವರತ ಉಳಿಸು
ಕ್ಷಾಮ ಡಾಮರಗಳನು ನೀನಿಂದು ಅಳಿಸು
ಸ್ವಾಮಿಯಾಗುತ ನೀನು ನಮ್ಮನ್ನು ಹರಸು
ಧರ್ಮವನು ಮರೆತಿರುವ ನಮಗೆ ನೀನಿಂದು
ಧರ್ಮ ಕಹಳೆಯನೂದಿ ಎಚ್ಚರಿಸು ಬಂದು
ಜನ ಜನಕೆ ದ್ವೇಶವಾಯಿತು ಇಂದು ಇಲ್ಲಿ
ಹಗಲಿರುಳು ಕದನಗಳು ತಂದೆ ಮಗನಲ್ಲಿ
ಹಣದಾಸೆಯಿಂದ ನಾವು ರಾಕ್ಷಸರು ಇಂದು
ತಂದೆ ತಾಯಿಯನೆಲ್ಲ ತಿನ್ನುವೆನು ಕೊಂದು
ಎಲ್ಲಿ ನೋಡಿದರೆ ಕೊಲೆ ಸುಲಿಗೆಯಾಗಿ
ಭಾರತಿಯು ಅಳುತಿಹಳು ತಾ ಅಬಲೆಯಾಗಿ
ಸರ್ವ ಜಾತಿಯ ನಾವು ಭಾರತದಿ ಒಂದು



## ಶಂಕರಾ, ಶಂಕರಾ, ಶಂಕರಾ.......

॥ ಓಂ ಶ್ರೀ ಪರಮೇಶ್ವರಾಯ ನಮಃ ॥

ಶಂಕರಾ, ಶಂಕರಾ, ಶಂಕರಾ.....
ಸರ್ವೇಶ್ವರಾ, ಜಗದೀಶ್ವರಾ, ಪರಮೇಶ್ವರಾ...
ಕಾಪಾಡು ನಂದೀಶ್ವರಾ..
ಕರುಣೆಯು ನೀನಲ್ಲವೇ ಎನ್ನ
ಬಾಳಿನ ಕಣ್ಣೀರು ನಿನಗಲ್ಲವೇ...
ಶಂಕರಾ, ಶಂಕರಾ, ಶಂಕರಾ...
ಸರ್ವೇಶ್ವರಾ, ಜಗದೀಶ್ವರಾ, ಪರಮೇಶ್ವರಾ...
ಗಿರಿಜೆಯ ವರನಾಗಿ । ಗೌರಿಯ ಪತಿಯಾಗಿ
ಅರ್ಧನಾರೀಶ್ವರ ನೀನಾಗಿ ನಿಂತೆ । ನೀನಾಗಿ ನಿಂತೆ
ಶಿರದಲ್ಲಿ ಗಂಗೆಯ । ಕಟ್ಟಿ ನೀ ಕುಳ್ಳಿರಿಸಿ
ಗುಪಿತದಿ, ಮುಚ್ಚಿ ನೀ ಗರ್ವವ ಮುರಿದೆ
ಭಗೀರಥನಂದು ತಾ । ಬಹು ಬಹು ತಪದಲ್ಲಿ
ನಿನ್ನನು ಬೇಡಲು ಗಂಗೆಯ ಬಿಟ್ಟೆ
ಹರಿವಳು ಅವಳಿಲ್ಲಿ । ಜುಳುಜುಳು ಎನುತಿಲ್ಲಿ
ಕಲಕಲ ನಾದವ ಮಾಡುತಳಿಲ್ಲಿ
ನಿನಗಿಲ್ಲ ಮನೆ ಮಠವು । ನಿನಗಿಲ್ಲ ನೆಲ ಜಗವು
ನಿನಗಿಲ್ಲ ಸಂಸಾರ ಎಲೆ ದೇವ ದೇವ
ಭಿಕ್ಷೆ ಪಾತ್ರೆಯು ಕೈಲಿ । ಅಕ್ಷಿಯು ಮೂರಿಹುದು
ಭಕ್ಷಿಸಿಹೆ ನೀನು ಘೋರ ವಿಷವನ್ನು
ನೀನಹುದು ನಿಜ ದೈವ । ನೀನಹುದು ನಿತ್ಯ ಶಿವ
ನೀನಹುದು ಎನ್ನ ಹೃದಯದ ದೇವ ದೇವ
ಕಲಿಯುಗದಿ ಬಳಲುತಿಹ । ನಿನ್ನ ಈ ಸುತರನ್ನು
ಕರುಣೆಯಿಂದಲಿ ರಕ್ಷಿಸೆಲೆ ದೇವ ದೇವ

## ಕೃಷ್ಣ ದಾಸನೆ ನಾನು ಮಾತೆ "ಕಮಲ"ಮ್ಮ

॥ ಓಂ ಶ್ರೀ ದಕ್ಷಿಣಾಮೂರ್ತಯೇ ನಮಃ ॥

ಕೃಷ್ಣದಾಸನೆ ನಾನು ಮಾತೆ "ಕಮಲ"ಮ್ಮ
ಅಹುದಹುದು ನಾನಿಮಗೆ ಎಲ್ಲರಿಗೂ ತಮ್ಮ
ಪುಟ್ಟಿರುವೆ ನಾನಿಲ್ಲಿ ಸುಳ್ಯಪದವಿನಲಿ
ಕೋಟಿ ಚೆನ್ನಯ ನೆಲದ ವೀರ ನಾಡಿನಲಿ
ಶಾಂತಿ ಪ್ರಿಯನೆ ನಾನು ಎನ್ನ ತಂದೆ "ಶಾಂತಪ್ಪ"
ಪೆಸರನಿಟ್ಟರೆನಗೆ ಮೊದಲು "ಕೃಷ್ಣಪ್ಪ"
ಮೊದಲು ವಿದ್ಯೆಯು ಎನಗೆ ಈ ನಾಡಿನಲ್ಲಿ
ಕಲಿತು ಆಯಿತು ಬಾಲ ಸುಬ್ರಹ್ಮಣ್ಯದಲಿ
ಮುಂದೆ ಓದಿದೆ ಕ್ಲಾಸು ಒಂಭತ್ತು ಇಲ್ಲಿ
ನಮ್ಮೂರ ಹೈಸ್ಕೂಲು ಸರ್ವ-ಉದಯದಲಿ (ಸರ್ವೋದಯ)
ಮೆಟ್ರಿಕ್ ಪಾಸಾದೆ ಬೆಂಗಳೂರಿನಲಿ
ಕಳೆದೆ ನಾ ದಶಕವನು ಗುಜರಾತಿನಲ್ಲಿ
ದೈವವನು ಹುಡುಕುತ್ತ ಸುತ್ತಿ ನಾ ದಣಿದೆ
ಭಕ್ತಿಯಲಿ ಬೇಡಿದರೆ ಅವನೊಲಿವ ತಿಳಿದೆ
ಬರೆಯುತಿಹ ಕವನಗಳ ಇಂದು ನಾನಿಲ್ಲಿ
ಹಾಡುತಿಹೆ ನಿಜಪಿತನ ನಿತ್ಯ ನಾನಿಲ್ಲಿ
ಬಾಳುವೆನು ನಿಮ್ಮೆಯಾ ಪ್ರೀತಿ ನೆರಳಲ್ಲಿ
ತಮ್ಮ ನಿಮ್ಮವ ನಾನು ನೀವೊಮ್ಮೆ ನೋಡಿ
ಜಗದೊಡೆಯ ಶ್ರೀಹರಿಯ ನಾಮವನು ಹಾಡಿ



## ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು

ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು
ಕಣ್ಣನ್ನು ಕರುಣೆಯಿಂದಲಿ ನೋಡಬೇಕು
ಕೈಯನ್ನು ಕೈಯಿಂದಲೇ ಎತ್ತಬೇಕು
ಮನವನ್ನು ಮಾತಿನಿಂದಲೇ ಅರಿಯಬೇಕು
ಕಷ್ಟವನು ನಗು ನಗುತ ನಾವ್ ಕಳೆಯಬೇಕು
ಇಷ್ಟವನು ಹಂಚುತ್ತ ನಾವ್ ಬಾಳಬೇಕು
ದಯೆಯನ್ನು ಸರ್ವರಲಿ ನಾವ್ ತೋರಬೇಕು
ದೇಶಕ್ಕಾಗಿಯೇ ಪ್ರಾಣ ನಾವೀಯಬೇಕು
ತಂದೆ-ತಾಯಿಯು ಸೇವೆ ನಾವ್ ಮಾಡಬೇಕು
ದೇವರಿರುವನೇ? ಎಂದು ನಾವ್ ತಿಳಿಯಬೇಕು
ಧರ್ಮದಲಿ ನಾವಿಂದು ಬಾಳಲೇ ಬೇಕು
ಕರ್ಮದಲಿ ಈಶನನು ನಾವ್ ಕಾಣಬೇಕು
ಕ್ರೈಸ್ತ, ಸಿಕ್ಕ, ಮುಸ್ಲೀಮರು ಎಲ್ಲ ಬೇಕು
ಹಿಂದುಗಳು ನಾವೆಲ್ಲ ಒಂದು ಇರಬೇಕು
ದೇವನೊಬ್ಬನೇ ಶಿವನು ಎಂದರಿಯಬೇಕು
ಓಂ ಎಂದು ಶಕ್ತಿಯನು ಧ್ಯಾನಿಸಲು ಬೇಕು
ಮನುಜ ಜನ್ಮವು ನಮಗೆ ಕೊನೆಯು ಇದು ಸಾಕು
ಮುಂದೆ ಮೋಕ್ಷಕೆ ನಾವು ಹಾತೊರೆಯಬೇಕು

## ಮನುಜ ಜೀವನವೊಂದು ಬಲುದೊಡ್ಡ ಕಡಲು

ಮನುಜ ಜೀವನವೊಂದು ಬಲುದೊಡ್ಡ ಕಡಲು
ತಿಳಿಯಲಾರೆವು ನಾವು ಇದಕಿರುವ ಒಡಲು
ಶರಧಿಯ ಜಲದ ನೆಲೆ ಕಂಡವರು ಯಾರು?
ಆಗಸದ ಎತ್ತರವ ಅಳೆದವರು ಯಾರು?
ನರಿ ಸತ್ತು ನರನಾಗಿ ಜನಿಸುವರು ಇಲ್ಲಿ
ಬೀಳುತ್ತ, ಏಳುತ್ತಕುಂಟುವರು ಇಲ್ಲಿ
ನಿತ್ಯ ಆನಂದವನು ಪಡೆವ ಬಗೆ ಎಂತು?
ಚಿಂತಿಸರು ಅಲ್ಪವಾದರೂ ನಮ್ಮ ಜನರು
ಆಸ್ತಿ ಪಾಸ್ತಿಯ ಗಳಿಪ ಮಾರ್ಗ ಹುಡುಕುತಲಿ
ಸ್ಥಿರವಹುದು ಈ ಜನುಮವೆಂದು ನೆನೆಯುತಲಿ
ಸಿಕ್ಕಿರುವ ದೇಹವನೇ ಮುಕ್ಕಿ ತಿನ್ನುವರು
ಕಷ್ಟಗಳು ಬಂದಾಗ "ಶಿವನೆ" ಎನ್ನುವರು
ಸಂತಸವು ಬಂದಾಗ ಸರ್ವವನು ಮರೆತು
ಸತ್ತು ಹೋದರು ಆಸೆ ಇವರೆಂದು ಬಿಡರು
ಸಿರಿ ಇರಲು ನರಿಯಂತೆ ಹಣವ ಕಾಯುವರು
ಕತ್ತಿನಲಿ ಸುತ್ತುವರು ಹತ್ತು ತೊಲೆ ಹೊನ್ನು
ಕತ್ತು ಹೋಗುವ ಭಯವು ಇಲ್ಲವರಿಗಿನ್ನು
ಚಿತ್ತ ಚಂಚಲೆಯರನ್ನು ಮುತ್ತಿ ಕಾಡುವರು
ಹುಚ್ಚು ಹಿಡಿಯುತಲವರು ಬೆಚ್ಚಗಾಗುವರು
ಮಾಯೆಯಲಿ ಸಿಕ್ಕಿ ಬಿಡಿಸಲು ತಿಳಿಯರವರು
ಕಾಯವನು ದಂಡಿಸುತ ಮಾಯವಾಗುವರು
ಎಲೆ ಮನುಜ ಇನ್ನಾದರು ನೀನು ತಿಳಿದು
ಬ್ರಹ್ಮಚರ್ಯ ವ್ರತವನಿಲ್ಲಿ ಪಾಲಿಸುತ
ಸರ್ವಶಕ್ತಿಯನ್ನೊಮ್ಮೆ ನೋಡು ನೀ ಬಂದು
ಓ ಮಗುವೇ ನೀನವನ ಜ್ಯೋತಿಯಾ ಬಿಂದು
ಕಾಮಿನಿಯು ಮಾಯೆಯ ಮೋಹ ಕೂಪವದು



## ನೀನು ನಗುತಿರುವಾಗ ಜಗವೆಲ್ಲ ನಗುತಿಹುದು

ನೀನು ನಗುತಿರುವಾಗ ಜಗವೆಲ್ಲ ನಗುತಿಹುದು
ನೀನು ಅಳುತ್ತಿರುವಾಗ ಸುತ್ತಳುವರೆಲ್ಲ
ನೀನು ಒಳಿತನು ಮಾಡೆ ಸರ್ವವೂ ಒಳಿತಹುದು
ನೀನು ಕೇಡನು ಬಗೆಯೆ ನಿನಗೆ ಕೇಡಹುದು
ಜೇನು, ಸಿಹಿಯನು ನೀನು ಬರಿ ನೆನೆದರೆಂತಕ್ಕು ?
ಬಾನಿನಲಿ ಮೋಡವದು ಬಂದು ಹೋಗುವುದು
ಅದರಂತೆ ಈ ಜೀವ ಜನುಮ ಹಲವೆತ್ತುವುದು
ಗಟ್ಟಿ ಮನವದು ಮಾಡು ಕಾಣಲವನೀಗ
ಶಿವನನ್ನು ನೀನಿಂದು ಇಲ್ಲಿ ನೋಡಲೇ ಬೇಕು
ಅದಕಾಗಿ ನೀ ಮಾಡು ನಿತ್ಯ ಧ್ಯಾನವನು
ನಿನಗೆ ದೇವನ ನೋಡಲೆಂದು ಮನವೊಂದಿರಲು
ಕೊನೆಗೆ ಅವನೇ ಬಂದು ನಿನಗೆ ಕಾಣಿಪನು
ನಿನ್ನ ಉಸಿರಲಿ ನಿನ್ನ ಜತೆಯಲ್ಲೇ ಇರುವನವ
ಚಿನ್ನ ಹರಸುತ ನಿನ್ನ ಬೆನ್ನ ಬಿಡನವನು
ಅವನನ್ನು ನೀ ನೆನೆದು ಅವನಂತೆ ನೀನಾಗು
ನಿಜವಹುದು ನೀನೆ "ಅವ" ಸತ್ಯ ಶಿವನು
ಮನುಜ ಜನುಮವು ಒಂದೇ ಜನುಮವಾಗಿಹುದಯ್ಯ
ಪರಶಿವನ ರೂಪಗಳ ಕಂಡು ಸೇವಿಸಲು

# ಎನ್ನ ತಂದೆಯು ಶಿವನು

॥ ಸೋಹಂ ಶಿವೋಹಂಃ ॥

ಎನ್ನ ತಂದೆಯು ಶಿವನು
ತಾಯಿಯೇ ಪಾರ್ವತಿಯು
ಬಂದುಗಳು ಶಿವಭಕ್ತರೆನಗೆ ಭುವಿಯಲ್ಲಿ
ಮನೆಯೇ ''ಭುವನವು'' ಎನಗೆ
ಲೋಕವೇ ''ಜಗ''ವಹುದು
ಹಾಸಿಗೆಯು ಭರತಮಾತೆಯ ಪುಣ್ಯ ನೆಲವು
ಆಗಸವೇ ಹೊದಿಕೆಯೈ
ಗಾಳಿಯೇ ಪ್ರಾಣವೈ
ಬಾಳುವೆಯೇ ಶಿವಧ್ಯಾನ ಅನವರತ ಎನಗೆ
ಸಕಲರಲಿ ಅವನಿಹನು
ಸರ್ವವೂ ಅವತಾನು
ಅವನೆ ಎಲ್ಲರ ಮೂಲ ಪರಮ ಶಿವನು
ಅವನೆ ರಕ್ಷಿಪನೆಮ್ಮ
ಅವನೆ ಕೊಲುವನು ಎಮ್ಮ
ಅವನೆ ನಿತ್ಯವು ಸಲಹಿ ಪೊರೆಯುವನು ಎಮ್ಮ
ನೀ ಮರೆತರೂ ಕೂಡ
ನಿನ್ನೆ ರಕ್ಷಿಸದೆ ಬಿಡೆ
ನಿತ್ಯ ಆತನ ನೆನೆದು ಪಡೆ ಶಾಂತಿಯನ್ನು



# ಸಂಸಾರ ಜೀವನವ ಸ್ಮರಿಸೇ ನೀ ನಿತ್ಯದಲಿ

## ॥ ಓಂ ಶ್ರೀ ರಾಮಾಯ ನಮಃ ॥

ಸಂಸಾರ ಜೀವನವ ಸ್ಮರಿಸೇ ನೀ ನಿತ್ಯದಲಿ
ಸಂಸಾರಿಯಾಗಿ ನೀನು ಅಳುವೆ ಸತ್ಯವದು
ದೈವವನು ನೆನೆಯುತ್ತ ನೀ ಮುಂದೆ ಸಾಗುತಿರೆ
ದಿವ್ಯ ಜೀವನವಿಹುದು ಇದು ಸತ್ಯ ಕಂದಾ
ನೀನೇನು ನೆನೆಯುವೆಯೋ ಅದುವೆ ನೀ ನೀನಯ್ಯ
ಇದು ದಿಟವು ಅದರಿಂದ ನೆನೆ ನೀನು ಶಿವನ
ನಿನಗೇಕೆ ಸತಿಸುತರು ನಿನಗೇತಕ ಧನಕನಕ
ನಿನಗೇತಕೆ ವ್ಯಥೆ ಮನದಿ ದೇವರಿರಲು
ಎಲ್ಲವೂ ಅಳಿಯುವುದು ಒಂದು ದಿನ ಸ್ಥಿರವಲ್ಲ
ದೇವರೊಬ್ಬನೆ ಸ್ಥಿರವು ನೆನೆ ದಿನವು ಅವನ
ಬಂದಿರುವೆ ಭುವಿಯಲ್ಲಿ ನೀ ಒಬ್ಬನಾಗಿರಲು
ಮುಂದೆ ನೀ ಮರಳುವೆಯು ಒಬ್ಬನಾಗಿ
ಇಂತಿರಲು ಏಕಿಲ್ಲ ಹಲವು ಸಂಸಾರಗಳು
ಮಾಡು ನಿತ್ಯವು ನೀನು ಹರಿಯ ಧ್ಯಾನವನು
ಹಾಡವನ ನಾಮವನು ಶ್ರೀಕೃಷ್ಣ ಶ್ರೀ ರಾಮ
ಬೇಡವನಲಿಂದು ನೀ ಶುದ್ಧ ಭಕ್ತಿಯನು
ಎಲೆ ಮಗುವೆ ದೈವವೇ ನಿತ್ಯವೂ ಶಾಶ್ವತನು
ದೇವರೇ ನಿನ್ನೆಯ ನಿಜ ಸತ್ಯ ಪಿತನು

## ಗೀತೆಯ ಜಗದಲಿ ಸಾರಿದ ಕೃಷ್ಣ

॥ ನಮೋ ಭಗವತೇ ವಾಸುದೇವಾಯ ನಮ: ॥

ಗೀತೆಯ ಜಗದಲಿ ಸಾರಿದ ಕೃಷ್ಣ
ಕೈಯಲಿ ಕೊಳಲನು ಹಿಡಿದಿಹ ಕೃಷ್ಣ
ತಲೆಯಲಿ ನವಿಲೆಳೆ ಧರಿಸಿದ ಕೃಷ್ಣ
ಗೋಪಿಯರೆಲ್ಲರ ಪ್ರೀತಿಯ ಕೃಷ್ಣ
ಗೋಪಾಲಕ ಶ್ರೀ ಗೋಪಾಲ ಕೃಷ್ಣ
ಬೆಣ್ಣೆಯ ಕದಿಯುವ ಕಳ್ಳನೇ ಕೃಷ್ಣ
ಚಿಣ್ಣರ ಸ್ನೇಹಿತನವನೇ ಕೃಷ್ಣ
ಭಕ್ತ ಸುದಾಮನ ಮಿತ್ರನೇ ಕೃಷ್ಣ
ಭಾರತ ಯುದ್ಧದ ನಾಯಕ ಕೃಷ್ಣ
ನಂದ ಕುಮಾರ ಶ್ರೀ ಯಶೋದ ಕೃಷ್ಣ
ಪಾಂಡವರೆಲ್ಲರ ರಕ್ಷಿಪ ಕೃಷ್ಣ
ಪಾಂಚಜನ್ಯವ ಊದಿದ ಕೃಷ್ಣ
ಭೀಷ್ಮಗೆ ಅಭಯವ ನೀಡಿದ ಕೃಷ್ಣ
ವಿದುರನು ಧ್ಯಾನಿಪ ದೇವನೇ ಕೃಷ್ಣ
ಕಾಳಿಯಮರ್ದನೇ ಬಾಲನೆ ಕೃಷ್ಣ
ಕಸ್ತೂರಿತಿಲಕ ಶ್ರೀ ಕೌಸ್ತುಭ ಕೃಷ್ಣ
ಕಲಿಯುಗದ ಜನರಿಗೆ ಅಭಯದ ಕೃಷ್ಣ
ಕಂಸನ ಮದಿಸಿದ ವೀರನೇ ಕೃಷ್ಣ
ಕೌರವ ನಾಶದ ಶಕ್ತಿಯೇ ಕೃಷ್ಣ
ಶಂಭಲದಿ ಮುಂದೆ ಜನಿಸುವ ಕೃಷ್ಣ
ಬೆಂಬಲ ಸಂತರಿಗಿವನಯ್ಯ ಕೃಷ್ಣ



## ಸದಾ ಎನ್ನ ಹೃದಯದಲ್ಲಿ ವಾಸವಾಗಿರು ಕೃಷ್ಣನೇ

|| ಓಂ ನಮೋ ನಾರಾಯಣಾಯ ದಾಸೋಹಂ ತವ ಕೇಶವ ||

ಸದಾ ಎನ್ನ ಹೃದಯದಲ್ಲಿ ವಾಸವಾಗಿರು ಕೃಷ್ಣನೇ
ಕೊಳಲನೂದುತ ನಾಟ್ಯವಾಡುತ ಮನವ ಸೆಳೆಯುವ ಕೃಷ್ಣನೇ
ದಿನವು ನಿತ್ಯವು ನಿನ್ನ ನಾಮವು ಎನ್ನ ಮನದಲಿ ನೆಲೆಸಲಿ
ಎನ್ನ ನಾಲಿಗೆ ನಿನ್ನ ನಾಮವ ಜನುಮ ಜನುಮವು ಜಪಿಸಲಿ
ಎನ್ನ ಕಂಗಳು ನಿನ್ನ ರೂಪವ ನಿತ್ಯ ನೋಡುತ ಬಾಳಲಿ
ಎನ್ನ ಕಿವಿಗಳು ನಿನ್ನ ಕೀರ್ತನೆ ಅನುದಿನವು ಜಗದಲಿ ಕೇಳಲಿ
ಎನ್ನ ಕೈಗಳು ನಿನ್ನ ಸೇವೆಯ ನಿತ್ಯವೂ ನಿಜ ಮಾಡಲಿ
ಎನ್ನ ಕಾಲ್ಗಳು ನಿನ್ನ ಸೇವೆಯ ನಿತ್ಯವೂ ಮಾಡಲಿ
ನೂರು ವರುಷವು ಬಾಳಿ ನಿನ್ನ ಕಾಣಲು ನಡೆದು ಮುಂದಕೆ ಸಾಗಲಿ
ನೂರು ವರುಷವು ಬಾಳಿ ನಿನ್ನನು ಹಾಡಿ ನಾ ಕುಣಿಯುವೆ
ಯಾರೂ ಇಲ್ಲದ ನಿನ್ನ ಸುತನು ತಂದೆ ನೀನೇ ರಕ್ಷಿಸು
ಕೃಷ್ಣ ನೀನೇ ಎನಗೆ ತಂದೆಯು ಕೃಷ್ಣ ನೀನೇ ತಾಯಿಯು
ಕೃಷ್ಣ ನೀನೇ ಎನಗೆ ಬಂಧುವು ಕೃಷ್ಣ ನೀನೇ ಸರ್ವವು
ಭಕ್ತಿ ಎನಗಿಂದು ನೀಡುತ ಮುಕ್ತಿ ಪಥವನು ತೋರಿಸು
ಮನುಜ ದೇಹದೊಳಗಿದ್ದು ನಿನ್ನಯ ಗಾನವನು ನೀ ಹಾಡಿಸು
ಕಲಿಯ ಯುಗದಲಿ ಸರ್ವರೆಲ್ಲರ ಕರುಣೆ ತೋರುತ ರಕ್ಷಿಸು
ನಾವು ಎಲ್ಲರು ನಿನ್ನ ಮಕ್ಕಳು ದಯವ ಎನ್ನೊಳು ತೋರಿಸು
ದೇವ ದೇವನೆ ಲೋಕಪಾಲನೆ ಈಶನೇ ಜಗದೀಶನೇ
ಕಾಳಿ ಮರ್ಧನ ಕಲಿಯ ನಾಶನ ಕಲಿಯುಗದಿ ನಮ್ಮನು ರಕ್ಷಿಸು

## ಬೆಳ್ಳಿತಟ್ಟೆಯ ಮೇಲೆ

**॥ ಓಂ ಶ್ರೀ ಚಂದ್ರಾಯ ನಮಃ ॥**

ಬೆಳ್ಳಿತಟ್ಟೆಯ ಮೇಲೆ
ಬೆಣ್ಣೆ ಮುದ್ಧೆಯ ತೆರದಿ
ನಗುತಿರುವ ಚಂದಿರನ ನೋಡೆನ್ನ ಗೆಳೆಯ
ಅಂಧಕಾರವ ಮರೆಸಿ
ಆನಂದವನು ಈವ
ಸುಂದರಾಂಗನ ನೀನು ನೋಡೆನ್ನ ಗೆಳೆಯ
ಅಂತ್ಯವಲ್ಲದ ಬಾನು
ಲೆಕ್ಕವಿಲ್ಲದ ತಾರೆ
ಗೆಲ್ಲ ಒಡೆಯನು ಪೂರ್ಣ ಚಂದಿರನು ಗೆಳೆಯ
ದಾರಿ ಹೋಕರಿಗೆ
ಸಹಕಾರಿಯಾಗುವ ತಂಪು
ಬೆಳಕ ನೀನೊಮ್ಮೆ ನೋಡೆನ್ನ ಗೆಳೆಯ
ಹುಣ್ಣಿಮೆಯ ದಿನದಂದು
ಅಮ್ಮ ಮಾಡಿದ ದೋಸೆ !
ಇಹುದೇ ಇಷ್ಟಕೆ ? ಹೇಳು ಓ ನನ್ನ ಗೆಳೆಯ
ಭೂಮಿಗುಪಗ್ರಹವಾಗಿ
ಬಾಲರಿಗೆ ಸಖನಾಗಿ
ದಕ್ಷ ಚಂದಿರ ಮಾಮ ಎಲ್ಲರಿಗೂ ಗೆಳೆಯ



## ನನ್ನ ಕನಸು

**॥ ಓಂ ಶ್ರೀ ಕಾಳಿಕಾಯೈ ನಮಃ ॥**

ಗುರುಗಳು ನುಡಿದರು ಕತೆಯೊಂದು
ಶುಕ್ರವಾರದ ದಿನದಂದು
ಮನೆಯನು ಸೇರುತ ಸ್ನಾನವ ಮುಗಿಸುತ
ಮಲಗಿದೆ ಬೇಗನೆ ನಾನಂದು
ದೀಪವ ಆರಿಸಿ ಹಾಸಿಗೆ ಮೇಲೆ
ಕತೆಯನು ನೆನೆಸುತ ಮಲಗಿದ್ದೆ
ರಾತ್ರಿಯ ಸಮಯ ಬಂದನು ಗುಹೆಯ
ಹೊರಗಡೆ ಭೀಕರ ರಕ್ಕಸನು
ನೋಡುತ ಹೆದರಿ ಚೀರಿದೆ ಭಾರಿ
ತಾಯಿಯ ಕರೆದೆನು ಕನಸಿನಲಿ
ತಾಯಿಯು ಎದ್ದು ಕರೆದಳು ‘‘ಮುದ್ದು‘‘
ಎಚ್ಚರವಾಗಲು ಬರೆ ಕನಸು
ಮರುದಿನ ಬರೆದೆನು ಕನಸಿನ ಕವಿತೆ
ಓದಲು ನಿಮಗಿದು ಬಲು ಸೊಗಸು

## ಓ ಏಳಿ ಎದ್ದೇಳಿ

ಓ ಏಳೀ ಎದ್ದೇಳಿ
ನನ್ನ ಕಂದಮ್ಮಗಳೇ
ಎಂದು ತಾ ಕರೆಯುತಿಹಳು ಭಾರತಿಯು ಇಂದು
ಕದವನ್ನು ತಟ್ಟುವಳು
ಕೈಯನ್ನು ಹಿಡಿಯುವಳು
ಧರ್ಮ ಕಹಳೆಯನಿಂದು ಊದುವಳು ಬಂದು
ದಾರಿ ತಪ್ಪಿಹ ನಮಗೆ
ಯಾರಿಹರು ಇಂದಿಲ್ಲಿ ?
ದೈವ ರಕ್ಷಣೆ ಬಿಟ್ಟು ಬೇರೆ ಗತಿಯಿಲ್ಲ
ಓಂಕಾರ ಮಂತ್ರದಲೇ
ನಾವಿಂದು ಶಕ್ತಿಯನು
ಒಕ್ಕೊರಲಿನಿಂದಲೇ ಕರೆಯಬೇಕು
ಬಡತನವು ಬಿಡದಿಂದು
ರೋಗರುಜಿನಗಳಿಂದು
ಕಷ್ಟಕಾರ್ಪಣ್ಯಗಳು ನಮ್ಮ ಸಂಗಾತಿ ಇಂದು
ಕಲಿಯುಗದಿ ನಮಗಿಲ್ಲಿ
ಶಾಂತಿಯೂ ಇನಿತಿಲ್ಲ
ದೇವರಿರುವನೆ ? ಎಂದು ಕೊರಗುವೆವು ಎಲ್ಲ
ಬಾಯ್ಬಿಟ್ಟು ಶಿವನನ್ನು
ಬಾ ಎಂದು ಶಕ್ತಿಯನು
ಕರೆದರಾತನು ಬರದೆ ಓಡುವನು ಎಲ್ಲಿ?
ಧರ್ಮದಾ ಮಹಿಮೆಯನು
ಸತ್ಯ-ಕರ್ಮದಿಂದಲೇ ಅರಿತು
ಧಾರ್ಮಿಕರು ನಾವಾಗಿ ಬಾಳ ಬೇಕೆಂದು
ಪುಣ್ಯ ಭೂಮಿಯೆ ಅಹುದು
ಭಾರತದಿ ಜನಿಸಿರುವ
ಭರತ ಮಾತೆಯ ಸುತರು ನಾವೆಲ್ಲ ಒಂದು



## ಅಕ್ಕಸಾಲಿಗನೊಬ್ಬ

॥ ಓಂ ಶ್ರೀ ಮುಕುಂದಾಯ ನಮಃ ॥

ಅಕ್ಕಸಾಲಿಗನೊಬ್ಬ
ಪಕ್ಕದಾ ಊರಿಂದ
ಚೊಕ್ಕ ಕೆಲಸಕ್ಕೆಂದು ನಮ್ಮೂರ ಬಂದ
ಎಮ್ಮ ಮನೆ ಎದುರಲ್ಲಿ
ಗೋಳಿಮರದಡಿಯಲ್ಲಿ
ಚಿಕ್ಕದೊಂದಂಗಡಿಯ ಬಂದು ತೆರೆದ
ಊರ ಸುತ್ತುತಲವನು
ತರುತಿದ್ದ ಚಿನ್ನವನು
ಸರ ಕೆಲಸ ಮಾಡಲಿದ್ದರು ನಾಲ್ವರಲ್ಲಿ
ಬಂದು ಕೇಳುವರು ಜನ
ಆಗಿದೆಯೇ ಎನ್ನ ಸರ?
ನಾಳೆ ಈಯುವನೆಂದು ಆಚಾರಿ ಹೇಳಿ
ಕಳೆದನವ ದಿನವನ್ನು
ನೂಕಿದನು ತಿಂಗಳನು
ತುಂಬಿದನು ಪೆಟ್ಟಿಗೆಯ ಬಂಗಾರದಿಂದ
ಮರುದಿವಸ ಮುಂಜಾವು
ಕೋಳಿ ಕೂಗುವ ಮುನ್ನ
ಆಚಾರಿ ಪರವೂರ ಸಂತಸದಿ ನಡೆದ
ಊರ ಕಳ್ಳನೇ ಲೇಸು
ಪರವೂರ ಸೊಬಗನು ಸಲ್ಲ
ಎಂದೊಮ್ಮೆ ಹೇಳಿದರು ಎನ್ನಜ್ಜ ಕತೆಯ
ತಿಳಿದು ಕೊಳ್ಳಿರಿ ನೀವು
ಈಕತೆಯ ಸಾರವನು
ಮುಂದೆಂದು ಸೋಲಾಗಿ ಪಡಬೇಡಿ ವ್ಯಥೆಯ

## ಪೂರ್ವ ಜನ್ಮದಿ ಗೈದ ಪುಣ್ಯದಿ

ಪೂರ್ವಜನ್ಮದಿ ಗೈದ ಪುಣ್ಯದಿ
ಪುಟ್ಟುವರು ಮಾನವ ಜನುಮದಿ
ಹೆಣ್ಣು-ಗಂಡುಗಳಿಬ್ಬರೊಬ್ಬರ
ದಯದಿ ಸೇರುವರಂದದಿ
ವರುಷ ಕಳೆಯಲು ಹರುಷ ಪಡೆಯಲು
ಪಡೆವರೊಂದು ಮಗುವನು
ಹೆಸರನಿಡುವರು ಮುದ್ದು ಮಾಳ್ಪರು
ಉಸಿರೊಳದರನು ನೋಳ್ಪರು
ಓದು ಬರಹ ವಿದ್ಯೆಗಳಿಸುತ
ತರುಣ ಪ್ರಾಯವ ಪಡೆವನು
ಕನ್ಯೆ ಹುಡುಕುತ ಮದುವೆ ಮಾಳ್ಪರು
ಮನದಿ ಸಂತಸ ಪಡುವರು
ಮನೆಯ ಒಡೆತನ ಆಸ್ತಿ ಹಿರಿತನ
ಎಲ್ಲ ಮಗನಿಗೆ ಈವರು
ಮುಪ್ಪು ಬಂದಿತು ಶಕ್ತಿ ಅಡಗಿತು
ನೀನೆ ನೋಡಿಕೊ ಎಂಬರು
ಹುಟ್ಟು ಸಾವಿನ ಮಧ್ಯೆ ಹಿರಿತನ
ಕೊನೆಗೂ ಬರುವುದು ಮುದಿತನ
ಏನು ಮಾಳ್ಪರು ಇದುವೆ ಜೀವನ
ಕಾಣದಾದರು ದೇವನ
ಇದನು ನೀ ತಿಳಿ ಎಲವೊ ಮನುಜನೆ
ಧೈರ್ಯದಲಿ ನೀ ಗುರಿ ಸಾಧಿಸು
ಸ್ಥಿರವು ಅಲ್ಲವೂ ಮನುಜ ದೇಹವು
ಮುಂದೆ ಅಳಿಯುವುದು ಮೋಹವು



ಶಕ್ತಿಯಿರುವುದು ತರುಣ ಪ್ರಾಯದಿ
ಶಕ್ತಿಯನು ನೀ ತಾ ತಿಳಿ
ದೇವ-ದೇವನ ಮೊದಲು ಕಾಣುತ
ಭಾವಿ ಜೀವನ ನೀ-ಕಿಳಿ
ಧ್ಯಾನ ಮಾಡುತ ಶಿವನ ನೋಡಿಕೊ
ಮುಂದೆ ತೊಂದರೆ ಇಲ್ಲವು
ಸತ್ಯವನು ನೀ ಮೊದಲು ಕಾಣುತ
ಭಕ್ತಿ ಮಾರ್ಗದಿ ಜೀವಿಸು
ಶಕ್ತಿಯಿದ್ದರೆ ಶಕ್ತಿಯನು ನೀ
ಯುಕ್ತಿಯಿಂದಲೇ ನೋಡುವೆ
ಸತ್ಯ ಮಾರ್ಗದಿ ನೀನು ನಡೆದರೆ
ಮುಕ್ತಿಮಾರ್ಗವ ಕಾಣುವೆ
ಸ್ಥಿರವೂ ಅಲ್ಲವು ಪತ್ನಿ ಮಕ್ಕಳು
ಆಸ್ತಿಪಾಸ್ತಿಯು ಜಗದಲಿ
ಒಂದೂ ಬಾರವು ಸಾವಕಾಲದಿ
ಕಳೆವೆ ನಿನ್ನಯ ದೇಹವ
ಅವರು ಇವರೆಂದೇಕೆ ಮೋಹವು?
ಸರ್ವವೂ ಶಿವನ ರೂಪವು
ಜೀವಿ ಮೋಕ್ಷವ ಪಡೆಯಲೋಸುಗ
ಬಂದಿತೀ ನರ ಜನ್ಮಕೆ
ಅದನು ನೀನಿಂದೇ ತಿಳಿಯುತ
ಮುಂದೆ ಕಾಲಿಡು ಭಕ್ತಿಗೆ
ಕೊನೆಗೆ ಸಿಗುವುದು ನಿಮಗೆ ಮುಕ್ತಿಯು

ಅದುವೆ ನಿತ್ಯವು ಶಾಂತಿಯು
ಹುಟ್ಟು ಸಾವುಗಳೇಕೆ ಮನುಜನೆ?
ಮನದಿ ನೀನಿದ ಯೋಚಿಸು
ಬಂದಿರುವೆ ನೀನಿಂದು ಲೋಕಕೆ
ಆತ್ಮ ಪಿತನನು ಧ್ಯಾನಿಸು
ಆಸ್ತಿ ಪಾಸ್ತಿಯ ಮೋಹದಿಂದಲಿ
ನಿನ್ನ ಆತ್ಮನ ಮರೆತಿಹೆ
ಸತ್ತ ಮರುದಿನ ಎಲ್ಲ ಬರುವರು
ಸುತ್ತ ಲೆಕ್ಕವ ಮಾಳ್ಪರು
ಆಸ್ತಿ ಪಾಸ್ತಿಯನೆಲ್ಲ ಕಾಂಬರು
ಪಾಲು ಮಾಡುತ ಎಂಬರು
ಕಳೆದೆ ನಿನ್ನ ಸರ್ವ ಜೀವನ
ನಿನ್ನ ಸಿರಿಯನು ತುಂಬಲು
ಅರಿಯದಾದೆಯ ಮೂಢ ಮನುಜನೆ
ನರಕ ತಪ್ಪದು ಮುಂದಕೆ
ತಲೆಯ ಬಡಿದಿಹೆ ಸುಲಿಗೆ ಮಾಡಿಹೆ
ನರಳಿ ಸಾಯುವೆ ನರಕದಿ
ಸತ್ಯದಿಂದಲಿ ಸಿರಿಯ ಗಳಿಸುತ
ಸರ್ವ ಸುಖವನು ಪಡೆಯುತ
ಗರ್ವವನು ನೀ ಬಿಟ್ಟು ಜಗದಲಿ
ಓರ್ವ ಮಾನವನಾಗುತ
ಸತ್ಯ ಧರ್ಮದಿ ನ್ಯಾಯ ಪ್ರೇಮದಿ
ಬಾಳು ನೀನೆಲೆ ಮನುಜನೆ
ಕೊನೆಗೆ ಸಿಗುವುದು ಆತ್ಮಶಾಂತಿಯು
ಶಿವನ ಲೋಕವು ಸತ್ಯವು



## ಹತ್ತೂರು ಸುತ್ತಿ ನೀ

ಹತ್ತೂರು ಸುತ್ತಿ ನೀ
ಯಾತ್ರೆಯನು ಮಾಡಿದೊಡೆ
ಕರ್ಮಫಲವದು ಬೆನ್ನ ಬಿಡುವುದೇನು?
ಇದ್ದಲ್ಲೇ ನೀ ಶಿವನ
ಸದ್ದಿಲ್ಲದೇ ನೆನೆಯೆ
ಉದ್ಧರಿಪನವ ಬಂದು ಕೈಲಾಸನಾಥ
ನಿನ್ನಾತ್ಮನೇ ಶಿವನು
ನೀನೋಡು ನಿನ್ನನ್ನು
ಮರುಳು ಮಾನವ ಶಿವನು
ಇನ್ನೆಲ್ಲಿ ಇಹನು?
ದೇಹವೇ ಆಲಯವು
ಆತ್ಮವೇ ನಿಜಪಿತನು
ಧ್ಯಾನಿಸುತ ನೀನವನ
ಕಂಡು ಕೊಂಡಾಡು
ಕೊಲಬೇಡ ಪ್ರಾಣಿಯನು
ಪಶುಪಕ್ಷಿ ಮೃಗಗಳನು
ಇಹನು ಎಲ್ಲದರಲ್ಲಿ
ಆ ಪರಮ ಶಿವನು
ಗಂಧದಾ ಪರಿಮಳವು
ತೇದಲ್ಲಿ ತಿಳಿಯುವುದು
ಅಣು ರೇಣು ತೃಣಕಾಷ್ಠದಲಿ ಇರುವನವನು
ಕಳ್ಳನಲಿ ಅವನಿಹನು
ಪಂಡಿತನೆ ಅವನಿಹನು
ಬಡವ ಸಿರಿವಂತರಲಿ ಇರುವನವನು
ಸಜ್ಜನಗೆ ತೋರುವನು
ಗರ್ಜನೆಗೆ ಬಾರನವ
ಸದ್ಭಕ್ತಿಗೇ ಒಲಿದು
ಕೊಡುವ ದರುಶನವ
ಸತ್ಯವನು ನೀನಾಡು
ಭಕ್ತಿಯನು ನೀ ಬೇಡು
ಶಕ್ತಿಯನು ಕೊಂಡಾಡಿ
ನೀ ನೋಡು ಅವನ

## ಕೋಟಿ ಚೆನ್ನಯರೆಂಬ

ಕೋಟಿ ಚೆನ್ನಯರೆಂಬ
ವೀರ ಬಿಲ್ಲವರಂದು
ಪುಟ್ಟಿ ಬೆಳೆದಿಹ ನಾಡು
ಪಡುಮಲೆಯು ಧನ್ಯ
ಜಟ್ಟಿ-ಕಾಳಗದಲ್ಲಿ
ನ್ಯಾಯ ಧರ್ಮಗಳಲ್ಲಿ
ಶೂರ ಬಾಲರ ಹಡೆದ ದೇಯಿ ಮಾತೆಯೇ ಧನ್ಯ
ಪುತ್ತೂರು ತಾಲೂಕಲಿ
ಮೆರೆದ ಪಡುಮಲೆಯಲ್ಲಿ
ಇದ್ದರೊಬ್ಬರು ಅರಸು
ಪೆರುಮಲೆ ಬಲ್ಲಾಳರೆಂದು
ಸತ್ಯ-ಧರ್ಮಗಳಲ್ಲಿ
ನ್ಯಾಯ-ನೀತಿಗಳಲ್ಲಿ
ಹೆಸರ ಪಡೆದಿಹರಂದು
ವೀರ ಬಳ್ಳಾಲರೆಂದು
ವೀರ ಪ್ರಜೆಗಳ ಜೊತೆಗೆ
ಬೇಟೆಯಾ ನೆಪದಲ್ಲಿ
ಕಾಡಿಗೋಗಲು
ಮುಳ್ಳು ಕಾಲಿಗಂದು
ಭರದಿಂದ ಚುಚ್ಚಿರಲು
ಮರಳಿದರು ಪಡುಮಲೆಗೆ
ತಿಂಗಳುರುಳಿತು ಕಾಲು ಗುಣವಾಗದಂದು
ಮಾಡಿದರು ಮದ್ದನ್ನು
ಯಂತ್ರ-ಮಂತ್ರಗಳನ್ನು
ಗುಣವಾಗದಿರಲಂದು ಕಾಲು ಕೊನೆಗೆ



ಹೊಡಿಸಿದರು ಡಂಗುರವ
ಊರ ಪರವೂರೆಲ್ಲ
ದೇಯಿ ಮಾತೆಯ ಸುದ್ದಿ
ಸಿಗಲು ಕೊನೆಗೆ
ಕಳಿಸಿದರು ಪಲ್ಲಕಿಯ
ಬರಿಸಿದರು ಮಾತೆಯನು
ಮದ್ದು ಮಾಡಲು ಕಾಲು
ಗುಣವಾಯ್ತು ಕೊನೆಗೆ
ಬಸಿರು ತಾಯಿಯು ಆಗ
ದೇಯಿ ಮಾತೆಯ ತಿರುಗಿ
ಭಾರಿ ಸಂಭ್ರಮದಿಂದ
ಕಳಿಸಿದರು ಮನೆಗೆ
ಗದ್ದೆಯಾ ಬದಿಯಲ್ಲಿ
ಹೆರಿಗೆ ನೋವದು ಬರಲು
ನಡೆಯದಾದರು ಮಾತೆ
ತಾ ಮುಂದೆ ಮನೆಗೆ
ಹಿಂದಿರುಗಿ ಅರಮನೆಗೆ
ತರಿಸಿದರು ಮಾತೆಯನು
ಜನುಮವಿತ್ತಳು ಮಾತೆ
ಅವಳಿ ಜವಳಿಗಳಿಗಂದು
ಮುದ್ದಿನಾ ಮಕ್ಕಳನು
ಪ್ರೀತಿಯಾ ತೋರುತಲಿ
ಬೆಳೆಸಿದರು ಅರಸು ಬಳ್ಳಾಲರಂದು
ಆಟದಲಿ-ಕೂಟದಲಿ
ವಿದ್ಯೆಯಲಿ-ಬುದ್ಧಿಯಲಿ
ಮನವ ಸೆಳೆದರು
ಕೋಟಿ ಚೆನ್ನಯರು ಅಂದು

ಚೆಂಡಿನಾ ಜಗಳದಲಿ
ಮಂತ್ರಿ ಬುದ್ಧಿವಂತರಲಿ
ಮೋಸದಾ ದ್ವೇಶವನು
ಕೊಂದೆ ತೀರಿಸುತಾ
ಸುದ್ದಿಯನು ಕೇಳುತ್ತ
ಕೋಪವನು ತಾಳುತ್ತ
ಅರಸರೆಂದರು ಹಿಡಿದು ತನ್ನಿರೆಂದು
ಚಂದು ಗಿಡಿಯನು ಕರೆದು
ಸೆರೆಮನೆಗೆ ನೂಕಲು
ಆಜ್ಞೆ ಇತ್ತರು ಅರಸು ರಾಜಾಜ್ಞೆಯೆಂದು
ಮೋಸದಲಿ ಚಂದುಗಿಡಿ
ಕೋಟಿ–ಚೆನ್ನಯರನ್ನು
ಸೆರೆಮನೆಯ ಕೋಣೆಯೊಳು ಬಂಧಿಸಿದನಂದು
ನಾಗಬ್ರಹ್ಮನ ನೆನೆದು
ತಮ್ಮ ತಾಯಿಯ ನೆನೆದು
ಸತ್ಯ ಪುರುಷರು ಜ್ಯೋತಿಯನು ಕಂಡರೊಂದು
ಒಡೆದರೈ ಬಂಧನವ
ನಡೆದರೈ ಅರಮನೆಗೆ
ದೈನ್ಯದಲಿ ಬಂದು
ಉಸುರಿದರು ದೊರೆಗಂದು
ನ್ಯಾಯವಿಲ್ಲದ ಸ್ಥಳದಿ
ಇದ್ದೇನು ಫಲವೆಂದು
ಬಿಟ್ಟು ತೊಲಗಿದರವರು
ಹೊರ ನಾಡಿಗಂದು
ಸೇರಿದರು ಪಂಜವನು



ಪಡೆದರಲ್ಲಾಶ್ರಯವ
ರಾಜ್ಯವಾಳುತ ಮೆರೆದು ಇದ್ದರಲ್ಲಿ
ಪಡುಮಲೆಯ ಅರಸಂಗೆ
ಪಂಜದಾ ಅರಸನೊಳು
ಸಮರಕ್ಕೆ ಕರೆಯೊಂದು ಬಂದಿತಂದು
ಯುದ್ಧದಾ ಭೂಮಿಯಲಿ
ಬಂದಿರುವ ಬಾಣ ತಾ
ಕೋಟಿಯನು ತನ್ನ ಬಲಿ ತೆಗೆಯಿತಂದು
ಇದನು ನೋಡುತ ತಮ್ಮ
ಚೆನ್ನೆಯನು ತಲೆಯನ್ನು
ಬಾವಿಯಾ ಕಟ್ಟೆಗೇ ಒಡೆದನಂದು
ಜನಿಸಿರುವ ದೇವಾಂಶ
ಎರಡು ಆತ್ಮಂಗಳೂ
ಬ್ರಹ್ಮೈಕ್ಯರಾಗಿ ತಾ ತೆರಳಿದರು ಕೊನೆಗೆ
ಕಟ್ಟಿಹರು ನಾಡಲ್ಲಿ
ಗರಡಿ ಮನೆ ಅಲ್ಲಲ್ಲಿ
ಕೊಡುತಿಹರು ನೆಮವನು ಕಾರಣಿಕರಿಗೆ
ನೆನೆದವರ ರಕ್ಷಿಸುತ
ಭಕುತರನು ಪೊರೆಯುತ್ತ
ಶಕ್ತಿಯನು ಕೋಟಿ–ಚೆನ್ನಯರು ನೀಡ್ವ-
ರಿಂದು
ದೇವಾಂಶ ಅವತಾರ
ತುಳುನಾಡಿನಾ ವೀರ
ಪುತ್ರರಿಬ್ಬರು ನಮ್ಮ ರಕ್ಷಿಸಲಿ ಬಂದು

**॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

## ಕಣ್ತೆರೆದು ನೀನೊಮ್ಮೆ ನೋಡು ಭಗವತಿಯ

ಕಣ್ತೆರೆದು ನೀನೊಮ್ಮೆ ನೋಡು ಭಗವತಿಯ
ಬಾಯ್ತೆರೆದು ನೀನೊಮ್ಮೆ ಹಾಡು ಭಗವತಿಯ
ಕಿವಿ ಕೊಟ್ಟು ನೀನೊಮ್ಮೆ ಕೇಳವಳ ಕತೆಯ
ಮನದಲ್ಲಿ ನಿತ್ಯವೂ ನೆನೆಯುವಳ ಸ್ಮೃತಿಯ
ಕೋಳಿ ಕೂಗುವ ಮುನ್ನ ಏಳು ನೀ ಮನುಜ
ಬಾಳಿದರೆ ಬಾಳು ನೀ ಭಗವತಿಯ ನೆನೆದು
ಭವ ಘೋರ ಸಂಸಾರ ಮೃತ್ಯು ಕೂಪವದು
ಭಕ್ತಿ ಮಾಡುತಲಿರಲು ಅದುವೆ ಸ್ವರ್ಗವದು
ಭಗವತಿಯೆ ಮಾಯೆಯನು ನಿರ್ಮಿಪಳು ಜಗದಿ
ತಾಯಿಯನು ಬೇಡುತಿರೆ ಪಾರು ಈ ಜಗದಿ
ಏರು ತಗ್ಗಿನ ಪಥವ ಎಡವಿ ಬೀಳುತಿರೆ
ಬಂದವಳು ಕಾಯುವಳು ಭಗವತಿಯು ಜಗದಿ
ಅವಳೆ ಎಮ್ಮಯ ತಾಯ ಅವಳೆ ಬಂಧುವು ಎಲ್ಲ
ಅವಳೆ ಈ ಜಗದ ಸರ್ವ ನಾಯಕಿಯು
ನೆನೆ ಅವಳ ನಿತ್ಯವೂ ಭಜಿಸುವಳ ಅನುದಿನವು
ಪಡೆವೆ ನಿತ್ಯವು ಅವಳ ಕೃಪೆ ಜಗದಿ ನೀನು
ಓ ತಾಯಿ ಭಗವತಿ ಕಾಪಾಡು ಎನ್ನಮ್ಮ
ನೀಡೆನಗೆ ಅನು ದಿನವು ಶುದ್ಧ ಭಕ್ತಿಯನು
ಜನ್ಮ ಜನ್ಮಾಂತರದ ಪಾಪಗಳ ನೀ ಕಳೆದು
ಮುಕ್ತಿಯನು ನೀ ನೀಡಿ ನಮ್ಮನ್ನು ಪೊರೆದು



## ಕಲಿಯುಗದ ಕತೆಯನ್ನು ನೀವೊಮ್ಮೆ ಕೇಳಿ

ಕಲಿಯುಗದ ಕತೆಯನ್ನು ನೀವೊಮ್ಮೆ ಕೇಳಿ
ಕಷ್ಟವಾಯಿತು ಜೀವನವು 'ಸಾಧು' ಗಳಿಗಿಲ್ಲಿ
ಕುಲಗೋತ್ರಗಳು ಇರಲಿ ಮಾನವತ್ವ ಇಲ್ಲಿಲ್ಲ
ಮನುಜ ದೇಹವು ಅಹುದು ರಕ್ಕಸರು ಒಳಗೆ
ರಕ್ಕಸರು ತುಂಬಿಹರು ಅಕ್ಕಪಕ್ಕದಲಿ
ಬೊಕ್ಕಸವ ಹುಡುಕುವರು ಮೂಲೆ ಮೂಲೆಯಲಿ
ಮನೆಯ ಗೃಹಿಣಿಯು ಇಂದು ಸಂತೆಯಲಿ ಇಹಳು
ಜನರೊಳಗೆ ಸ್ವಚ್ಛಂದವಾಗಿ ಬೆರೆಯುವಳು
ಪತಿವ್ರತೆಯು ಇಂದಿಲ್ಲಿ ಕೋರ್ಟು ಕಚೇರಿಯಲಿ
ಸೌಂದರ್ಯ ದೇವಿ ತಾ ರಂಗ ಮಂಟಪದಲಿ
ಮನೆಯ ದೇವಿಯು ಇಂದು ಮಾರುವಳು ದೇಹ
ಕಾಮದಾಸೆಯ ನೀಗೆ ಪರರೊಳಗಿಹುದು ಮೋಹ
ತಲೆಯನ್ನು ಬಿಚ್ಚು ಹಾಕುತ ನಡೆವಳವಳು
ಬಗಲಿನಡಿಯಲ್ಲಿ ಒಂದು ಲೇಡೀಸು ಬ್ಯಾಗು
ಧರಿಸಿಹಳು ಫಿಟ್‌ಪ್ಯಾಂಟು ಹಾಕಿಹಳು ಅಂಗಿ
ತೋರುತಿಹಳವಳಿಂದು ದೇಹವನು ನಮಗೆ ನೂಕಿ
ಸೀತೆಯ ಭೂಮಿಯದು ಸಾಕಾಯಿತ್ತಪ್ಪಾ
ಈ ರೀತಿ ಕಲಿಯುಗದ ಕತೆ ತಿಳಿಯಿರಪ್ಪಾ

## ಮರಳಿ ಕೈಲಾಸಕ್ಕೆ ಶಿವ ಕರೆಯುತಿಹನು

॥ ಓಂ ನಮಃ ಶಿವಾಯ ॥

ಮರಳಿ ಕೈಲಾಸಕ್ಕೆ ಶಿವ ಕರೆಯುತಿಹನು
ಬರಲಿ ಬರಿವವರೆಲ್ಲರೆಂದು ಹೇಳಿಹನು
ಕಲಿಯುಗದ ಕಲಿ-ಕಾಲ ತುಳಿತಕ್ಕೆ ಸಿಕ್ಕಿ
ಅಳುತಿಹರು ಜನರಿಂದು ಬಿಕ್ಕಿ ಬಿಕ್ಕಿ
ಇದನೋಡಿ ಶಿವನಿಂದು ಕರುಣೆ ತೋರಿಹನು
ಶಿವೆಯಲ್ಲಿ ಈ ಮಾತನೆಂದೆ ಪೇಳಿಹನು
ಜಗದಲ್ಲಿ ನನ್ನನ್ನು ಮರೆತಿಹರು ಎಲ್ಲ
ಜನರಲ್ಲಿ ಭಯ-ಭಕ್ತಿ ಒಂದಿನಿತು ಇಲ್ಲ
ಜನರನ್ನು ಜನರೆಲ್ಲ ಕೊಲ್ಲುತಿಹರಿಂದು
ನ್ಯಾಯ ಧರ್ಮವು ನಶಿಸಿ ಹೋಗಿಹುದು ಇಂದು
ತನ್ನಾತ್ಮ ನಿಜ ಪಿತನು ಯಾರೆಂದು ಕೇಳಿ ?
ಅರಿಯದಾದರು ಅವರು ನಿಜ ಚಂದ್ರಮೌಳಿ
ಯೋಗಿಗಳು ತ್ಯಾಗಿಗಳು, ಸೇರಿಹರು ಎನ್ನ
ಇಂದಲ್ಲ ಸಾಸಿರದ ವರ್ಷಕ್ಕೂ ಮುನ್ನ
ಇದರಿಂದಲೇ ಮನುಜನಾಗಿರುವ ಹಾಳು
ಇನ್ನಾದರೂ ನೀನು ಶಿವ ಶಿವಾ ಎನ್ನು
ಪಂಚ ಅಕ್ಷರ ಮಂತ್ರವೇ ಬಾಳ ಹೊನ್ನು
ಪಂಚಾಕ್ಷರೀ ಮಂತ್ರವೇ ಅಮೃತದ ಬಿಂದು
ಪರಮ ಹಂಸವ ಪಡೆಯಲದು ಬಾಳ ಬಂಧು
ಜಪಿಸು ನೀನನವರತ ಈ ಮಂತ್ರವನ್ನು
ದಿಟವದು ಸೇರ್ವೆನೀ ಕೈಲಾಸವನ್ನು



## ಮೂಳೆ ಮಾಂಸಗಳಿಂದ ತುಂಬಿರುವ ಚೀಲದಲ್ಲಿ

ಮೂಳೆ ಮಾಂಸಗಳಿಂದ ತುಂಬಿರುವ ಚೀಲದಲಿ
ಹಾಳು ಮಲ ಮೂತ್ರಗಳ ಜೋಳಿಗೆಯು ಸತ್ಯ
ಕೂರಿಸುತ ಕುಣಿಸುವನು ಕೈಲಾಸನಾಥ
ಹತ್ತು ತಿಂಗಳ ಗರ್ಭದೊಳಗಿಂದ ಹೊರಬಂದು
ಭೂಮಿಯಲಿ ಬೀಳ್ವ ಶಿಶು ರೂಪನ್ನಾಂತು
ಕಳೆದಿರುವ ಪೂರ್ವಜನ್ಮದ ಜನನ ವೃತ್ತಾಂತ
ತಿಳಿಯದಾದನು ಜ್ಞಾನ ಶೂನ್ಯತಾನಾತ!
'ಹಾ' ಎಂದು ಅಳುತಳುತ ತಂಡತಾಯಿಯಕಂಡು
ರಾಕ್ಷಸರು ಇವರೆಂದು ಅಳುತ ಜೋರಾಗಿ
ಬಾಲ್ಯದಲಿ ಎಳೆತನವ ಕಳೆಯುತ್ತ ಕೊನೆಗೆ ತಾ
ಮುಂದೆ ಮಾತಾಪಿತರ ಗುರುತವನು ತಿಳಿವ
ಮುಂದೆ ಮಕ್ಕಳ ಆಟ ಪಾಠಗಳು ತಾನಾಯ್ತು

ಎಳೆತನವು ಆಟದಿಂದಲೇ ಮುಗಿದುಹೋಯ್ತು
ಬುದ್ಧಿ ವಿಕಸನವಾಯ್ತು ದೇಹವೂ ಬೆಳೆದಾಯ್ತು
ತರುಣವಾಗುತ ಲೋಕ ವಿಷಯದರಿವಾಯ್ತು
ಮೀಸೆಯು ಚಿಗುರಿತ್ತು ಯೌವನವು ತುಂಬಿತ್ತು
ಆಸರೆಯು ಸ್ರೀ ಸುಖದ ಮನದಿ ಬಲಿದಿತ್ತು
ಪ್ರೀತಿ ಪ್ರಣಯಗಳಾಯ್ತು ಮದುವೆ ಮಕ್ಕಳು ಆಯ್ತು
ಸಂಸಾರ ಸಾಗರವೆ ಭವದ ಕಡಲಾಯ್ತು
ಮುಂದೆ ಮುದಿತನ ಬಂತು ರೋಗರುಜಿನಗಳಾಯ್ತು
ಕೈಕಾಲು ನಡುಕವೇ ಶಕ್ತಿ ಅಡಗಿತ್ತು
ಕೊನೆಗೊಮ್ಮೆ ಯಮನಾಳು
ನಡೆ ನೀನು ಯಮಪುರಕೆ ಕರೆದಿಹನು ಎಂದು
ಸಂಸಾರ ಸಾಗರದಲ್ಲಿ ಪ್ರೀತಿ ಗೋಪುರದಲ್ಲಿ

ಮುಳಗಿರುವ ಮಾನವಗೆ ಇದು ತಿಳಿಯದೇನು ?
ಸತ್ತಾಗ ತನ್ನೊಡನೆ ಸತಿಸುತರು ಇನ್ನೆಲ್ಲಿ ?
ಆಸ್ತಿಪಾಸ್ತಿಯ ಗಂಟು ನಂಟರುಗಳೆಲ್ಲಿ ?
ಈಶನಾ ಭಕುತಿಯೇ ನಿನಗೆ ಜಯವಹುದು
ದರಿಂದ ನೀ ಮನುಜ ನೆನೆ ದಿನವು ಶಿವನನ್ನು
"ಶಿವ ಶಿವಾ" ಎಂದು ನೀ ತ್ಯಜಿಸು ದೇಹವನು
ಇಹದಲ್ಲೇ ನೀ ಬೇಡಲೆ ಬೇಕು ಶಿವನನ್ನು
ಅದಕಾಗಿ ಅನವರತ ಮಾಡು ಭಕುತಿಯನು

## ಯುಗ ಯುಗದಿ ಕರುಣೆಯಲಿ ಸಲಹುವನು ಅವನು

॥ ಶ್ರೀ ಪರಮೇಶ್ವರಾಯ ನಮಃ ॥

ಯುಗ ಯುಗದಿ ಕರುಣೆಯಲಿ ಸಲಹುವನು ಅವನು
ಕೈಲಾಸವಾಸಿಯೇ ಮುಕ್ಕಣ್ಣ ಶಿವನು
ಅರಿಯದಾದೆಯ ಇನಿತು ಶಿವನ ಒಲವನ್ನು
ಕೂತಲ್ಲಿ ನಿಂತಲ್ಲಿ ಶಿವ-ಶಿವಾ ಎನ್ನು
ನಡೆವಾಗ ನುಡಿವಾಗ ಶಿವ ರಕ್ಷಿಸೆನ್ನು
ಗರ್ವದಿಂದಲೆ ನೀನು ಮರೆತೆ ಇದನೆಲ್ಲ
ಹರಿ-ಹರರು ಬ್ರಹ್ಮರೆಲ್ಲರು ಬೇರೆಯಲ್ಲ
ಎಲ್ಲರೂ ಭಗವತಿಯ ಅಂಶ ಇವರೆಲ್ಲ
ಶಿವ ಶಕ್ತಿಯಾ ಒಮ್ಮತವೇ ವಿಶ್ವವಿಂದು
ಭಗವತಿಯೇ ನಮ್ಮ ಸರ್ವಸ್ವವಿಂದು
ಶಿವನಲ್ಲದೆ ಅನ್ಯ ದೈವ ಒಂದಿಲ್ಲ
ಎಲ್ಲ ದೈವದ ಮೂಲ ಶಿವನದನು ಬಲ್ಲ
ಅನುದಿನವು ಉಸಿರಲ್ಲಿ "ಓಂ ಶಿವಾ" ಎನ್ನು
"ಶಿವ ಶಿವಾ" ಎಂದು ನೀ ಪಡೆ ಮೋಕ್ಷವನ್ನು
ಯೋಗೇಶ್ವರನ ನೆನೆದು ಯೋಗಿ ನೀನಾಗು
ಯೋಗ ಮಾಯೆಯ ಬಂಧನವ ನೀಗಿ ನೀ ಸಾಗು



## ಸತ್ಯ ಧರ್ಮ ನ್ಯಾಯವೆಂದರೇನು ತಿಳಿಯದಾದೆವು

ಸತ್ಯ ಧರ್ಮ ನ್ಯಾಯವೆನದರೇನು
ತಿಳಿಯದಾದೆವು
ತಂದೆ ತಾಯಿ ಅಣ್ಣ ತಮ್ಮರೆಲ್ಲ
ಮರೆತು ಬಟ್ಟೆವು
ಧನದ ಆಸೆಯಿಂದ ಇಂದು
ಧರ್ಮವನ್ನು ಸುಟ್ಟೆವು
ದಾರಿ ನಡೆವ ಜನರ ಕಂಡು
ಗೇಲಿ ಮಾಡಿ ನಲಿವೆವು
ಯಾರ ತಾಯಿ ಯಾರ ತಂಗಿ
ಎಂದು ಮನದಿ ಸ್ಮರಿಸದೆ
ಕಂಡ ಕಂಡ ತರುಣಿಯಲ್ಲಿ
ಕಾಮ ಭಾವವಿಡುವೆನು
ಮಾಂಸವನ್ನು ತಿನ್ನಲ್ಲೆಂದೆ
ಪಶುಗಳನ್ನು ಕೊಲುವೆವ
ಗೋವು ಹತ್ಯೆಯಿಂದ ಘೋರ
ಪಾಪಕಿಂದು ಇಳಿದೆವು

ಹಣದ ಆಸೆಯಿಂದ ತಂದೆ
ತಾಯಿಯನ್ನು ಕೊಲುವೆವು
ಆಸ್ತಿ ಪಾಸ್ತಿಗಾಗಿ ರಕ್ತ
ಚೆಲ್ಲಿ ಚೆಲ್ಲಿ ನಲಿವೆವು
ದೇಶ ಸೇವೆ ಎಂದು ನಾವು
ಪಕ್ಷ-ಪಾರ್ಟಿ ಕಟ್ಟುತ
ಸುಲಿಗೆ ಮೋಸದಿಂದ ಜನರ
ಬಲಿಯೆ ಕಂಡು ನಲಿವೆವು
ಸತ್ಯಯುಗದ ಬ್ರಹ್ಮವಿದ್ಯೆಯೆಲ್ಲ
ಮಾಯವಾಯಿತು
ಕಲಿಯ ತುಳಿತಕ್ಕಿಂದು ಸಿಕ್ಕಿ
ದೇಶ ನಾಶವಾಯಿತು
ಪಿತೃ ಭಕ್ತಿಯನ್ನು ಮರೆತು
ಅಸುರ ಜನ್ಮ ತಳೆದೆವು
ಗುರುವು ಎಂದರಾರು? ಎಂದು
ಗರ್ವದಿಂದ ನಡೆವೆವು
ದೇವರೆಲ್ಲಿ? ಎಂದು ದರ್ಪದಿಂದ
ಪ್ರಶ್ನೆ ಮಾಳ್ವೆವು
ಶಕ್ತಿಯನ್ನು ಮರೆತು ನಾವು
ಸರ್ವನಾಶವಾದೆವು



## ಪೃಥ್ವಿಯಲಿ ಪುಣ್ಯ ಭೂಮಿಯೆ ನಮ್ಮ ಭಾರತವು

ಪೃಥ್ವಿಯಲಿ ಪುಣ್ಯ ಭೂಮಿಯೆ ನಮ್ಮ ಭಾರತವು
ಜನರಿಂದು ಮರೆತಿಹರು ಇದನು ಎಲ್ಲ
ಜಗದೀಶನೇ ಅವನು ಶ್ರೀ ಕೃಷ್ಣ ಜನಿಸಿದ ನೆಲವು
ಜನರೇಕೆ ನೆನೆಯದಿಹರದರ ಶಿವನ ಬಲವ ?
ಜನಿಸಿ ಮೋಕ್ಷವ ಪಡೆವ ಒಂದೆ ನೆಲವಿಲ್ಲಿ
ರಾಮ ಹುಟ್ಟಿದ ಭೂಮಿ ರಾಮರಾಜ್ಯವು ಅಂದು
ಕಾಮಿಗಳು ನಾವ್ ಸುಖದ ಪ್ರೇಮಿಗಳು ಇಂದು
ಸೀತೆ ಜನಿಸಿದ ಭುವಿಯು ಸಿರಿದೇವಿಯಾ ನೆಲವು
ಸೋತೆ ಹೋಯಿತು ಇಂದು ಉಳಿಯದೀ ನೆಲವು
ಕಲಿಯುಗದಿ ಧರ್ಮವದು ಕಾಣದದು ಬೆಳಕನ್ನು
ಕಳೆದು ಕೊಂಡೆವು ನಾವು ಮನದ ಶಾಂತಿಯನು
ಶಂಕರನೆ ಜನಿಸಿ ಬಂದಿಹನಂದು ಶಂಕರನಾಗಿ
ಭಾರತದಿ ಕೇರಳದ ಕಾಲಡಿಯಲಂದು
ಕಾಣೆದಾದೆವು ಪಥವ ಆತ್ಮದಾ ಮೋಕ್ಷಕ್ಕೆ
ಕಂಗೆಟ್ಟು ಬಳಲುವೆವು ಅಳುತಿಹೆವು ಬಿಕ್ಕಿ
ಧರ್ಮದಾ ಹೆಸರಿನಲಿ ಧನವನ್ನು ಸುಲಿಯುತಲಿ
ಧರ್ಮವನು ಸಿರಿಗಾಗಿ ಬಳಸುತಿಹರಿಲ್ಲಿ
ದಾರಿ ನೋಡುತಲಿಹೆವು ಅತ್ತು ಬೇಡುತಲಿಹೆವು
ಎತ್ತು ನೀ ಅವತಾರ ಸುತ್ತ ಭಾರತದಿ
ಸಾಧುಗಳು ಕಾಯುವರು ನಿನ್ನ ಲೀಲೆಯ ನೋಡೆ
ಏದುಸಿರು ಬಿಡುವೆವು ನಾವಿಂದು ಇಲ್ಲಿ
ಶಂಭಲದಿ ನೀ ಮುಂದೆ ಜನಿಸಿ ಬರುವುದು ಇರಲಿ
ಬೆಂಬಲಿಗರಾರೆಮಗೆ ಇಹರು ಇಂದಿಲ್ಲಿ
ಶಂಭು ನೀನೇ ಬಂದು ಪರಿಹರಿಸು ಕಷ್ಟಗಳ
ಪಾರ್ವತೀಶನೆ ನಿನಗೆ ಸರ್ವ ಮಂಗಳವು

ರಕ್ಷಿಸುವ ಭರತ ಮಾತೆಯ ನಾವು ಇಂದು
ಹಿಂದು ಕ್ರೈಸ್ತರು ಬೇರೆ ಮುಸ್ಲಿಮರು ಅಲ್ಲ
ಎಲ್ಲರೊಂದೇ ಶಿವನ ಸುತರು ನಾವೆಲ್ಲ
ಜಾತಿಭೇದವನಿಂದು ನಾವ್ ತೊಡೆಯಬೇಕು
ನೀತಿ ಮಾರ್ಗವು ತೋರಿ ನಾವ್ ಬಾಳಬೇಕು
ಒಳಗಿರುವ ದ್ವೇಷ ಭಾವನೆ ಅಳಿಯಬೇಕು
ಸರ್ವರಲಿ ಪ್ರೀತಿಯನು ನಾವ್ ತೋರಬೇಕು
ಭರತ ಮಾತೆಯ ಕೀರ್ತಿಯನು ಉಳಿಸಬೇಕು
ಜನ್ಮಭೂಮಿಯುನಿಂದು ರಕ್ಷಿಸಬೇಕು
ಕಲಿಯುಗದ ಕಾರ್ಕೋಟ ಬಂದಿಹುದು ಇಲ್ಲಿ
ಎಲ್ಲರನು ನುಂಗುವುದು ವಿಷವನ್ನು ಚೆಲ್ಲಿ
ಕಾಮಕ್ರೋಧಗಳಲ್ಲಿ ಜನರಿಂದು ಬಿದ್ದು
ನಡೆಯದಾದರು ದಾರಿ ಬಿರುಸಿಂದ ಎದ್ದು
ತಾಯಿಯನು ಮರೆತು ಇಂದು ಮಾಡುವೆವು ನಿದ್ದೆ
ಎಚ್ಚರಿಪಳಿಂದು ಮಾತೆಯು ನಮಗೆ ಒದ್ದೇ
ಹೇ ಶಿವನೇ ನೀನಿಂದು ಕರುಣೆಯ ತೋರು
ನಿನ್ನ ಮಕ್ಕಳನಿಂದು ನೀಮಾಡು ಪಾರು
ಸರ್ವರನು ಕ್ಷಮಿಸುತ್ತ ಜ್ಞಾನವನು ನೀಡಿ
ಸಲಹು ನೀನೆಂದು ಬೇಡುವೆವು ಕೈಜೋಡಿ



**KALIYUGAVAHINI :** A poetry collection written by Swamy Krishnananda Saraswati which is came out of in meditation visions with poetry mood and published by Surya Jyothi Yoga Vedantha Prakashana Bangalore-560 095, Karnataka, India.

ಕಾಯ್ದಿರಿಸಿದೆ – 2008

ಮೊದಲ ಪರಿಷ್ಕೃತ ಮುದ್ರಣ : ಡಿಸೆಂಬರ್ 2008–ಪ್ರತಿಗಳು 1000

**ಪ್ರಕಟಣಾ ನಿರ್ವಹಣೆ:**
ಸೂರ್ಯ ಜ್ಯೋತಿ ಯೋಗ ವೇದಾಂತ ಪ್ರಕಾಶನ
ನಂ.46, 5ನೇ ಬ್ಲಾಕ್, 4ನೇ ಕ್ರಾಸ್, ಕೋರಮಂಗಲ,
ಬೆಂಗಳೂರು – 560 095, ಕರ್ನಾಟಕ, ಭಾರತ.
ದೂರವಾಣಿ : 080–25505972
ಮೊಬೈಲ್ : 9902539230, 9480001823
www.suryajyothi.ind.c / www.suryajyothiyoga.com
e-mail:suryajyothiyoga@gmail.com

**ಮುದ್ರಣ :**

ಫೋಟೋ

ಅರ್ಪಣೆ :

ಸ್ವಾಮೀ ವಿಷ್ಣು ದೇವಾನಂದ ಸರಸ್ವತಿ
Swamy Vishnudevananda Saraswati

ಪೂರ್ವಾಶ್ರಮ ಮಾತಾಪಿತರ ಸ್ನೇಹ ಮತ್ತು ಪ್ರೇಮದ ಸಂಕೇತವಾಗಿ
ಶ್ರೀ ಶಾಂತಪ್ಪ ಮತ್ತು ಶ್ರೀಮತಿ ಕಮಲ

---

ಪ್ರತಿಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ :


**ಸೂರ್ಯ ಜ್ಯೋತಿ ಯೋಗ ವೇದಾಂತ ಸಾಧನ ಗುರುಕುಲಂ**
ಪದಡ್ಕ, ಗ್ರಾಮ : ಪಡುವನ್ನೂರು, ಅಂಚೆ : ಸುಳ್ಯಪದವು,
ಪುತ್ತೂರು ತಾಲೂಕು, ದ. ಕ. ಪಿನ್: 574 313, ಕರ್ನಾಟಕ, ಭಾರತ
ಮೊಬೈಲ್: 9902539230, ಫೋನ್ : 08251–289307

**ಸೂರ್ಯ ಜ್ಯೋತಿ ಯೋಗ ವೇದಾಂತ ಕೇಂದ್ರ**
ನಂ.46, 5ನೇ ಬ್ಲಾಕ್, 4ನೇ ಕ್ರಾಸ್, ಕೋರಮಂಗಲ,
ಬೆಂಗಳೂರು–560 095, ಫೋನ್ ನಂಬ್ರ: 080-25505972,
ಮೊಬೈಲ್: 9902539230, 9480001823
www.suryajyothi.ind.c / www.suryajyothiyoga.com
e-mail:suryajyothiyoga@gmail.com